
# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಏಪ್ರಿಲ್ 2014
ಬೆಲೆ ರೂ. 1

## ದೆಹಲಿಯ ಆತ್ಮದ ತುಣುಕುಗಳು



ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 7
ಏಪ್ರಿಲ್ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

## ನೇರ ಮಾತು

"ದೆಹಲಿ ಕರ್ನಾಟಕ ಸಂಘವು ದೆಹಲಿ ಮತ್ತು ಸುತ್ತಮುತ್ತಲಲ್ಲಿರುವ ಕನ್ನಡಿಗರ ಆಶೋತ್ತರಗಳನ್ನು ಪೂರೈಸುತ್ತಾ ಕನ್ನಡ ಸಂಸ್ಕೃತಿ ಮತ್ತು ಭಾಷೆಗೆ ಅತ್ಯಮೂಲ್ಯ ಕೊಡುಗೆಯನ್ನು ನೀಡುತ್ತಾ ಬಂದಿದೆ. ಕರ್ನಾಟಕದ ಪ್ರಸಿದ್ಧ ಸಾಹಿತಿ, ಕಲಾವಿದರ ಜತೆಗೆ ಹೊಸ ಪ್ರತಿಭೆಗಳನ್ನೂ ದೇಶದ ರಾಜಧಾನಿಯಲ್ಲಿ ಪ್ರೋತ್ಸಾಹಿಸುತ್ತದೆ.

ಗಾಯಕಿ ಬಿ.ಕೆ. ಸುಮಿತ್ರ ಅವರನ್ನು ಕುರಿತು ದೆಹಲಿಯಲ್ಲಿ ಕುಳಿತು ಚಿಂತಿಸಿದರೆ ಅವರು ನಮಗೆಲ್ಲಾ ಬಹಳಷ್ಟು ಹಿರಿಯ, ಜನಪ್ರಿಯ ಹಾಗೂ ಪ್ರಬುದ್ಧ ಕಲಾವಿದೆ. ಅವರನ್ನು ದೆಹಲಿ ಆಮಂತ್ರಿಸಿ ಅವರಿಂದ ಒಂದು ಕಾರ್ಯಕ್ರಮವನ್ನು ಮಾಡಿಸುವುದೆಂದರೆ ಅದು ನಮಗೆಲ್ಲಾ ಹೆಮ್ಮೆ ಹಾಗೂ ಗೌರವದ ವಿಚಾರ.

ದೆಹಲಿ ಕರ್ನಾಟಕ ಸಂಘದ ಈಗಿರುವ ಸಾಂಸ್ಕೃತಿಕ ಸಮುಚ್ಚಯವು 2005ರಲ್ಲಿ ನಿರ್ಮಾಣವಾಯಿತು. ಆಗ ಸಂಘದ ಅಧ್ಯಕ್ಷರಾಗಿದ್ದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರ ನೇತೃತ್ವದಲ್ಲಿ ಹೊಸ ಹುಮ್ಮಸ್ಸಿನಿಂದ ನಾವೆಲ್ಲರೂ ಒಗ್ಗಟ್ಟಾಗಿ ಕನ್ನಡದ ಕೆಲಸವನ್ನು ಹೊರನಾಡಿನಲ್ಲಿ ಮಾಡುತ್ತಿದ್ದೆವು. ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆಯಾದರೆ ಸಾಲದು ಅದರಲ್ಲಿ ಕನ್ನಡ ಸಂಸ್ಕೃತಿ ಹಾಗೂ ಭಾಷೆಯ ಕಾರ್ಯಕ್ರಮಗಳಾಗಬೇಕೆಂದು ನಿರ್ಣಯಿಸಲಾಯಿತು. 2005ರ ಏಪ್ರಿಲ್ 15ರಿಂದ 30ರವರೆಗೆ ಪ್ರತಿದಿನ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಹೊಣೆಯು ನನ್ನ ಮೇಲಿತ್ತು.

ಸಂಘದ ಸಮುಚ್ಚಯವನ್ನು ಕಟ್ಟಲು ಸುಮಾರು ಮೂರು ಕೋಟಿ ರೂಪಾಯಿಗಳ ಸಾಲವನ್ನು ಪಡೆಯಲಾಗಿತ್ತು. ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಕೆಲವೊಂದು ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಡೆಸಲಾಯಿತಾದರೂ ಕರ್ನಾಟಕದಿಂದ ಕಲಾವಿದರನ್ನು ಕರೆಸಿ ಕಾರ್ಯಕ್ರಮ ನೀಡುವುದರಲ್ಲಿ ಬಹಳಷ್ಟು ಶ್ರಮ ವಹಿಸಬೇಕಾಯಿತಲ್ಲದೇ ಅವರಿಗೆಲ್ಲಾ ಪ್ರಯಾಣದ ಮತ್ತು ವಸತಿಯ ಉತ್ತಮ ವ್ಯವಸ್ಥೆಗಳನ್ನು ಮತ್ತು ಸಂಭಾವನೆಗಳನ್ನು ನೀಡಲು ಕಷ್ಟಕರವಾಗಿತ್ತು.

ಅಂತಹ ಸಂದರ್ಭದಲ್ಲಿ ನಾವು ಬಿ.ಕೆ. ಸುಮಿತ್ರಾ ಅವರ ಕಾರ್ಯಕ್ರವೊಂದನ್ನೂ ನಡೆಸಿದೆವು. ಅವರ ಜತೆ ಸುಪ್ರಿಯಾ ಆಚಾರ್ಯ, ಯಶವಂತ ಹಳಬಂಡಿ, ಡಾ. ಮೇಮಗಲ್ ನಾರಾಯಣ ಸ್ವಾಮಿ, ಪುರಂದರ ಭರಣಿ ಮುಂತಾದವರು ಬಂದಿದ್ದರು. ಏಪ್ರಿಲ್ ತಿಂಗಳ ಉರಿಬಿಸಿಲಿಗೆ ಬೆಂಗಳೂರಿನಿಂದ ದೆಹಲಿಗೆ ಎರಡನೇ ದರ್ಜೆ ಸ್ಲೀಪರ್ ಕ್ಲಾಸ್‌ನಲ್ಲಿ ರೈಲು ಪ್ರಯಾಣ ಮಾಡಿ ಅವರೆಲ್ಲಾ ಬಂದಿದ್ದರು. ಆಗ ತಾನೇ ಉದ್ಘಾಟನೆಗೊಂಡಿದ್ದ ಬಹಳಷ್ಟು ಸೌಕರ್ಯಗಳಿಲ್ಲದ ಸಂಘದ ವಸತಿಯಲ್ಲಿಯೇ ಅವರು ಉಳಿದುಕೊಂಡರು. ನಮಗೆಲ್ಲರಿಗೂ ಹೇಳಲಾಗದ ಸಂಕೋಚ.

ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಸುಮಿತ್ರಾ ಅವರು "ನೀವೆಲ್ಲಾ ಕಷ್ಟಪಟ್ಟು ಇಷ್ಟು ಒಳ್ಳೆಯ ಕಟ್ಟಡ ಕಟ್ಟಿದ್ದೀರಿ. ಸಾಲ ಬೇರೆ ಇದೆ. ಇಂತಹ ಸಂದರ್ಭದಲ್ಲಿ ನಾವು ಒಂದು ಕಾರ್ಯಕ್ರಮ ನೀಡಬೇಕು. ಅದು ನನ್ನ ಉದ್ದೇಶ, ನಿಮ್ಮ ಪ್ರಯತ್ನದೆದುರು ನಮ್ಮದೇನಿಲ್ಲಪ್ಪ, ಸಂಕೋಚಪಡಬೇಡಿ" ಎಂದು ಪ್ರೀತಿಯಿಂದ ನಮ್ಮನ್ನು ಹುರಿದುಂಬಿಸಿದರು. ಎರಡು ದಿನ ಸಂಘದಲ್ಲಿದ್ದ ಅವರು ಸಂಘದ ಹೂಗಿಡಗಳಿಗೆ ಬೆಳಿಗ್ಗೆ ಎದ್ದು ನೀರು ಹಾಕುವುದರಿಂದ ಹಿಡಿದು, ಸಂಘದಲ್ಲಿ ಒಂದು ಅತ್ಯುತ್ತಮ ಸಂಗೀತ ಕಾರ್ಯಕ್ರಮವನ್ನು ನೀಡುವಲ್ಲಿಯವರೆಗೆ ದೆಹಲಿಯ ಎಲ್ಲರ ಮನಗೆದ್ದಿದ್ದರು. ಅದರ ನಂತರ ಅವರು ಮೂರು ಸಲ ದೆಹಲಿಯಲ್ಲಿ ಸಂಗೀತ ತರಬೇತಿ ಶಿಬಿರವನ್ನು ನಡೆಸಿಕೊಟ್ಟರು. ದೆಹಲಿಯ ಬಹಳಷ್ಟು ಮಂದಿಗೆ ಅವರು ಸಂಗೀತ ಗುರುವಾದರು. ಕೆಲವರಿಗೆ ಆಂಟಿಯಾಗಿ, ಅಕ್ಕನಾಗಿ, ಅಮ್ಮನಾಗಿ ಬಿ.ಕೆ. ಸುಮಿತ್ರಾ ಅವರು ನಮ್ಮ ಕುಟುಂಬದ ಭಾಗವಾಗಿದ್ದರೆ. ಅವರ ನಿಕಟ ಸಂಪರ್ಕದಿಂದ ನಾನು ನಮ್ಮ ಹುಟ್ಟೂರಾದ ಪುತ್ತೂರಿನ ಕಾಣಿಯೂರಿನಲ್ಲಿ ಅವರಿಂದ ತರಬೇತಿ ಶಿಬಿರವನ್ನು ನಡೆಸುವಂತಾಯಿತು. ಒಂದು ತರಬೇತಿ ಶಿಬಿರ ಮಾಡಬೇಕೆಂದು ಹೊರಟಾಗ "ಇರುವುದಕ್ಕೆ ಜಾಗ, ಊಟಕ್ಕೆ ಅನ್ನ, ಸಾರು ಕೊಟ್ಟರೆ ಸಾಕು ಬೇರೇನೂ ಬೇಡ, ನಾವು ಗಳಿಸಬೇಕಾದುದನ್ನು ಗಳಿಸಿದ್ದೇವೆ. ಹೆಸರು ಮಾಡಿದ್ದೇವೆ" ಎನ್ನುತ್ತಾ ಬಂದರು. ಎಲ್ಲರೊಂದಿಗೂ ಸಲುಗೆಯಿಂದ, ಆತ್ಮೀಯತೆಯಿಂದ, ಪ್ರೀತಿಯಿಂದ ಮತ್ತು ಅತ್ಯಂತ ಸರಳತೆಯಿಂದ ಒಂದು ವಾರ ಕಳೆದ ಬಿ.ಕೆ. ಸುಮಿತ್ರಾ ಬೆಂಗಳೂರಿಗೆ ತೆರಳುವಾಗ ಭಾಗವಹಿಸಿದ 250 ಶಿಬಿರಾರ್ಥಿಗಳ ಜೊತೆಗೆ ಅವರ ಹೆತ್ತವರೂ ಕಣ್ಣೀರಿಟ್ಟರು!

'ನನ್ನಲ್ಲಿ ಇರುವುದನ್ನು ಒಂದಷ್ಟು ಜನರಿಗೆ ಹೇಳಿಕೊಡಬೇಕು'– ಇದು ಅವರ ಮುಗ್ಧತೆಯೊಂದಿಗಿನ ಶ್ರೀಮಂತ ಮಾತು. ಅವರ ಸರಳತೆಯ ಗುಣ ಅವರನ್ನು ಜನರ ಹತ್ತಿರ ಸೆಳೆಯುತ್ತದೆ. ದೆಹಲಿಯವರೇ ಆಗಲಿ, ಹಳ್ಳಿಯವರೇ ಆಗಲಿ ಅವರ ಬರುವಿಕೆಗೆ ಎಲ್ಲರೂ ಕಾಯುತ್ತಿರುತ್ತಾರೆ.

ಸರಳ, ಸುಂದರ, ಆತ್ಮೀಯ ಇತರರಿಗೆ ಮಾರ್ಗದರ್ಶಕರಾಗಿರುವ ಬಿ.ಕೆ. ಸುಮಿತ್ರಾ ಶ್ರೀಮಂತ ಮನಸ್ಸಿನ ಗಾಯಕಿ. ಅವರ ಜೊತೆಗೆ ನಡೆದಾಡುವ, ಓಡಾಡಲು ಸಿಕ್ಕಿರುವ ಅವಕಾಶ ಜೀವನದ ಅತೀ ಸುಂದರ ಮರೆಯಲಾಗದ ಕ್ಷಣಗಳು". ಹೀಗೆಂದು ಮಾರ್ಚ್ 8ರಂದು ಬೆಂಗಳೂರಿನಲ್ಲಿ ನಾಡೋಜ ಡಾ. ಬಿ.ಕೆ. ಸುಮಿತ್ರ ಅವರ ಕುರಿತು ಪ್ರಕಟಗೊಂಡ 'ಗಾನಯಾನ'ದಲ್ಲಿ ನಾನು ಬರೆದಿದ್ದೆ. ಈ ಕೃತಿ ಹೊರಬರುವಷ್ಟರಲ್ಲಿ ನಮ್ಮೆಲ್ಲರ ಪ್ರೀತಿಯ ಶ್ರೀಮತಿ ಬಿ.ಕೆ. ಸುಮಿತ್ರ ಮತ್ತು ಶ್ರೀ ಬಿ.ವಿ. ಶ್ರೀನಿವಾಸ್ ಅವರು 4ನೇ ಬಾರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಮತ್ತೆ ಸಂಗೀತ ತರಬೇತಿ ಶಿಬಿರವನ್ನು ನೀಡಿ ಯುಗಾದಿಯ ಸಂದರ್ಭದಲ್ಲಿ, ಕರ್ನಾಟಕ ಸಂಘವನ್ನು ಸಂಗೀತಮಯದ ಜೊತೆಗೆ ಕನ್ನಡಮಯಗೊಳಿಸಿದರು. ಈ ಎಲ್ಲಾ ಹುರುಪಿನೊಂದಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ವಿಶೇಷ ಗುಣಮಟ್ಟದ ಕಾರ್ಯಕ್ರಮಗಳನ್ನು ನೀಡುವ ಪ್ರಯತ್ನವನ್ನು ಮಾಡುತ್ತೇವೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಕಳೆದ ತಿಂಗಳು ದೆಹಲಿ ಕರ್ನಾಟಕ ಸಂಘದಲ್ಲಿ ಬಹಳಷ್ಟು ಕಾರ್ಯಕ್ರಮಗಳು ನಡೆದಿವೆ. ಕನ್ನಡ ಕಾರ್ಯಕ್ರಮಗಳ ಜೊತೆಗೆ ತುಳು ಮತ್ತು ಕೊಡವ ಕಾರ್ಯಕ್ರಮಗಳು ನಡೆದಿವೆ.
ಸಂಘದ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಆಟೋಟ ಸ್ಪರ್ಧೆಗಳು ತುಂಬಾ ಸೊಗಸಾಗಿ ನಡೆದಿದೆ. ವಿವಿಧ ಸ್ಪರ್ಧೆಗಳಲ್ಲಿ ಸುಮಾರು 600 ಸದಸ್ಯರು ಭಾಗವಹಿಸಿ 300 ಬಹುಮಾನಗಳನ್ನು ಪಡೆದಿದ್ದಾರೆ. ಈ ಆಟೋಟ ಸ್ಪರ್ಧೆಗಳನ್ನು ನಡೆಸಿಕೊಟ್ಟ ಸಂಚಾಲಕರಾದ ಶ್ರೀ ಬೆಳ್ಳಿಯಪ್ಪನವರಿಗೆ ಅಭಿನಂದನೆಗಳು.
ದೆಹಲಿ ಕರ್ನಾಟಕ ಸಂಘವು ಎಲ್ಲ ಸಂಘ–ಸಂಸ್ಥೆಗಳ ಜೊತೆಗೂಡಿ ಕಾರ್ಯಕ್ರಮಗಳನ್ನು ನಡೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಏಪ್ರಿಲ್ 6ರಂದು ಗುರ್‌ಗಾಂವ್‌ನಲ್ಲಿ ಮತ್ತು ಮುಂಬರುವ ದಿನಗಳಲ್ಲಿ ಜೆ.ಎಸ್.ಎಸ್. ನೋಯ್ಡಾ, ಜನಕಪುರಿ ಕನ್ನಡ ಕೂಟ, ದೆಹಲಿ ಕನ್ನಡ ಪೋಲಿಸ್ ಕಲ್ಯಾಣ ಸಮಿತಿಯೊಂದಿಗೆ ಕಾರ್ಯಕ್ರಮಗಳನ್ನು ಆಯೋಜಿಸಲಿದ್ದೇವೆ.
ಮಾರ್ಚ್ 27, 28, 29ರಂದು ನಾಡೋಜ. ಡಾ.ಬಿ.ಕೆ. ಸುಮಿತ್ರ ಮತ್ತು ಖ್ಯಾತ ಸಂಗೀತ ನಿರ್ದೇಶಕ ಬಿ.ವಿ. ಶ್ರೀನಿವಾಸ್ ಅವರ ಜೊತೆ ನಡೆದ ಸಂಗೀತ ತರಬೇತಿ ಶಿಬಿರದಲ್ಲಿ ಸುಮಾರು 50ಕ್ಕೂ ಹೆಚ್ಚು ಕನ್ನಡಿಗರು ತರಬೇತಿ ಪಡೆದು ಕಾರ್ಯಕ್ರಮವನ್ನು ನೀಡಿದ್ದಾರೆ. ಈ ಕಾರ್ಯಕ್ರಮಕ್ಕೆ ಶ್ರಮಿಸಿದ ಬಿ.ಕೆ. ಸುಮಿತ್ರ ಮತ್ತು ಬಿ.ವಿ. ಶ್ರೀನಿವಾಸ್ ಅವರಿಗೆ ಅಭಿನಂದನೆಗಳು.
ಏಪ್ರಿಲ್ 12ರಂದು, ಮೊಬೈಲಾಯಣ, ದಾಯೆಗ್ ಇಂಚ ಆಂಡ್, ನಾಳೆಬನ್ನಿ ಮತ್ತು ಏಪ್ರಿಲ್ 13ರಂದು ಹಿತ್ತಲ ಗಿಡ ಮದ್ದಲ್ಲ, ತ್ಯಾಗಿ ಮತ್ತು ಶ್ರೀಕೃಷ್ಣ ಸಂಧಾನ ನಿರಂತರ ನಾಟಕಗಳು ನಡೆಯಲಿದೆ. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

ದೆಹಲಿ ಕರ್ನಾಟಕ ಸಂಘದಲ್ಲಿ

# ತಿಂಗಳ ಕಾರ್ಯಕ್ರಮ

## 12 ಮತ್ತು 13 ಏಪ್ರಿಲ್ 2014 ನಿರಂತರ ನಾಟಕ

**12 ಏಪ್ರಿಲ್ (ಶನಿವಾರ) 2014**

ಮಧ್ಯಾಹ್ನ : 2.30 ರಿಂದ 3.30

**ಮೊಬೈಲಾಯಣ**

ಪ್ರಸ್ತುತಿ : ಕಾವೇರಿ ಗೆಳೆಯರ ಬಳಗ

ಸಂಜೆ : 4.00 ರಿಂದ 5.00

**ದಾಯೆಗ್ ಇಂಚ ಆಂಡ್**

ಪ್ರಸ್ತುತಿ : ದೆಹಲಿ ತುಳುಸಿರಿ

ಸಂಜೆ : 5.30 ರಿಂದ 6.30

**ನಾಳೆ ಬನ್ನಿ**

ಪ್ರಸ್ತುತಿ : ದೆಹಲಿ ಫ್ರೆಂಡ್ಸ್

**13 ಏಪ್ರಿಲ್ (ಭಾನುವಾರ) 2014**

ಮಧ್ಯಾಹ್ನ : 2.00 ರಿಂದ 3.00

**ಹಿತ್ತಲ ಗಿಡ ಮದ್ದಲ್ಲ**

ಪ್ರಸ್ತುತಿ : ಜನಕಪುರಿ ಮಹಿಳಾ ಮಂಡಳಿ

ಸಂಜೆ : 3.30 ರಿಂದ 4.30

**ತ್ಯಾಗಿ**

ಪ್ರಸ್ತುತಿ:ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ

ಸಂಜೆ : 5.00 ರಿಂದ 6.00 ಗಂಟೆಗೆ

**ಶ್ರೀಕೃಷ್ಣ ಸಂಧಾನ**

ಪ್ರಸ್ತುತಿ : 'ಸ್ನೇಹಾ' ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್

## 14 ಏಪ್ರಿಲ್ 2014 ಸಂಜೆ 6 ಗಂಟೆಗೆ ಸಂವಾದ

ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಂಗೀತ ಕಲಾರತ್ನ ಪ್ರೊ. ಮೈಸೂರು ವಿ. ಸುಬ್ರಹ್ಮಣ್ಯ ಅವರಿಗೆ ಅಭಿನಂದನೆ ಮತ್ತು ಸಂವಾದ ಕಾರ್ಯಕ್ರಮ

## 11 ಮೇ 2014 ಸಂಜೆ 5 ಗಂಟೆಗೆ ವಚನ ಗಾಯನ

ಪಂಡಿತ್ ಸೋಮನಾಥ ಮರಡೂರ್ ಮತ್ತು ತರಬೇತಿ ಪಡೆದ ದೆಹಲಿ ಕನ್ನಡ ಗಾಯಕರ ವಚನ ಗಾಯನ ಮತ್ತು ವಿಶೇಷ ಕಾಯಕ್ರಮಗಳು.

### ಹಿಂದೂಸ್ತಾನಿ ಸಂಗೀತ

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

### ತಬಲಾ ಕಲಿಕೆ

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಏಪ್ರಿಲ್ 2014ರಂದು ಬೆಳಿಗ್ಗೆ 10 ಗಂಟೆಯಿಂದ **ಡಾ. ಸಾಯಿಪ್ರಶಾಂತಿ ಶೆಟ್ಟಿ** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಏಪ್ರಿಲ್ 2014ರಂದು ಸಾಯಂಕಾಲ 4 ಗಂಟೆಯಿಂದ **ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 27 ಏಪ್ರಿಲ್ 2014 ರಂದು ಸಾಯಂಕಾಲ 4 ಗಂಟೆಯಿಂದ.

### ವಚನ ಗಾಯನ ತರಬೇತಿ

**ಏಪ್ರಿಲ್ 20, 26 ಮತ್ತು 27ರಂದು** ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ವಚನ ಗಾಯನ ತರಬೇತಿ ನೀಡಲಾಗುವುದು. ಆಸಕ್ತಿಯುಳ್ಳವರು ಹೆಸರನ್ನು ಸಂಘದ ಕಚೇರಿಯಲ್ಲಿ ನೊಂದಾಯಿಸಬೇಕಾಗಿ ವಿನಂತಿ.

'ದೆಹಲಿ ಕರ್ನಾಟಕ ಸಂಘದ ಅಭಿಮತ' ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘದ ಇಮೇಲ್ (dksangha@gmail.com) ಗೆ ಕಳುಹಿಸಿ.

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

***ಸಂಪಾದಕ ಮಂಡಳಿ***

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848584 / 8860848585 – 011-26109615 / 65643615**

# ಸಂಘದಲ್ಲಿ ಡಾ. ವಿ.ಕೃ. ಗೋಕಾಕ್ ಸಾಹಿತ್ಯ ಗೋಷ್ಠಿ



ದೆಹಲಿ ಕರ್ನಾಟಕ ಸಂಘ ಮತ್ತು ಡಾ. ವಿ.ಕೃ. ಗೋಕಾಕ್ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಹಾವೇರಿಯ ಸಹಯೋಗದೊಂದಿಗೆ ಮಾರ್ಚ್ 12ರಂದು ಜ್ಞಾನಪೀಠ ಪ್ರಶಸ್ತಿ ವಿಜೇತ ಬರಹಗಾರ ಡಾ. ವಿನಾಯಕ ಕೃಷ್ಣ ಗೋಕಾಕ್ ಅವರ ಬಗ್ಗೆ ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಘದಲ್ಲಿ ನಡೆದ ಗೋಷ್ಠಿಯಲ್ಲಿ ಕರ್ನಾಟಕದಿಂದ ಆಗಮಿಸಿದ್ದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ ಹಾಗೂ ಡಾ. ಸಿ.ಎನ್. ರಾಮಚಂದ್ರನ್ ಅವರು ಡಾ. ವಿ.ಕೃ. ಗೋಕಾಕ್ ಅವರ ಬಗ್ಗೆ ತಮ್ಮ ವಿದ್ವತ್ಪೂರ್ಣ ವಿಚಾರಗಳನ್ನು ಮಂಡಿಸಿದರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ಮೂವತ್ತರ ದಶಕದಲ್ಲಿ ಕನ್ನಡವನ್ನು ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು ಕಟ್ಟಿದ ಕುರಿತು ಹೇಳಿದರು. ಒಟ್ಟು ಭಾರತೀಯ ಸಂದರ್ಭಗಳಲ್ಲಿ ಓದಲೇಬೇಕಾದ ಕೃತಿಗಳನ್ನು ರಚಿಸಿದ ಪ್ರತಿಭಾವಂತ ಹಾಗೂ ಮಹತ್ತರ ಲೇಖಕರಲ್ಲಿ ಅವರು ಒಬ್ಬರಾಗಿದ್ದರು. ವಿಶೇಷವಾಗಿ ಅವರ ಪ್ರವಾಸ ಬರಹಗಳು, ಸಾಹಿತ್ಯದಲ್ಲಿನ ಅವರ ಪ್ರಯೋಗಶೀಲತೆಯನ್ನು ಎಂತಹವರು ಮೆಚ್ಚಲೇಬೇಕಾಗಿದೆ ಎಂದು ತಿಳಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಡಾ. ಸಿ.ಎನ್. ರಾಮಚಂದ್ರನ್‌ರವರ ಗೋಕಾಕರ ಬಗ್ಗೆ ಮಾತನಾಡುತ್ತಾ ಕನ್ನಡ ಸಾಹಿತ್ಯದ ಘಟ್ಟಗಳನ್ನು ಕಾಲಾನುಸಾರವಾಗಿ ಪರಿಗಣಿಸಬೇಕೇ ಹೊರತು ಗುಣಾನುಸಾರವಾಗಿಯಲ್ಲ ಎಂದು ತಿಳಿಸಿದರು. ಡಾ. ವಿ.ಕೆ. ಗೋಕಾಕರು ನವೋದಯ ಕಾಲಘಟ್ಟವನ್ನು ಕಟ್ಟುವಿಕೆಯಲ್ಲಿನ ಅವರ ಮಹತ್ತರವಾದ ಪಾತ್ರವನ್ನು ನಮ್ಮ ಅರಿವಿಗೆ ತಂದರು. ಸ್ವಭಾವತಃ ಪ್ರವಾಸಪ್ರಿಯರಾಗಿದ್ದ ಅವರು ತಾವು ಹೋದಲ್ಲೆಲ್ಲಾ, ನೆಲೆಸಿದಲ್ಲೆಲ್ಲಾ ಸಾಹಿತ್ಯಕ ಕುಟುಂಬಗಳನ್ನು ಕಟ್ಟುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

‘ಮೆಚ್ಚು ಗನ್ನಡದಲ್ಲೋರೇನೆ ನಾನೀ ಕೃತಿಯಂ’ ಎಂದು ಹೇಳುವಲ್ಲಿ ಅವರ ಕನ್ನಡದ ಮೇಲಿನ ಪ್ರೀತಿಯನ್ನು ಕಾಣಬಹುದಾಗಿದೆ. ಇಡೀ ಕನ್ನಡ ಸಾಹಿತ್ಯವನ್ನು ಒಂದು ಕುಟುಂಬವಾಗಿ ಕಟ್ಟುವ ಕಾರ್ಯದಲ್ಲಿ ಎಂದೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಗೋಕಾಕ ವರದಿ ‘ಗೋಕಾಕ ಚಳುವಳಿ’ ಎಂದೇ ನಂಬಲಾಗಿದೆ. ಅಲ್ಲಿನ ವರದಿಯನ್ನು ಗಮನಿಸಿದಾಗ ಅವರಿಗೆ ಕನ್ನಡದ ಮೇಲಿದ್ದ ಪ್ರೀತಿ ಗೌರವಾಧಾರಗಳನ್ನು ಕಾಣಬಹುದಾಗಿದೆ. ಇದರ ಫಲವಾಗಿ ಕನ್ನಡೇತರ ಶಾಲೆಗಳಲ್ಲೂ ಹತ್ತನೇ ತರಗತಿಯವರೆಗೆ ಒಂದು ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಓದಬೇಕಾಗಿದೆ. ಆ ಚಳುವಳಿಯಿಂದ ಕನ್ನಡಿಗರು ಎಚ್ಚೆತ್ತುಕೊಂಡಿದ್ದಾರೆ ಎಂದು ಸಿಎನ್‌ಆರ್ ಅವರು ನುಡಿದರು.

ಗೋಕಾಕ್ ಅವರು ಅನೇಕ ಕನ್ನಡಪರ ಸುಯೋಗ, ಚಳುವಳಿಗಳಲ್ಲಿ ತಾವೇ ಸ್ವತಃ ನಾಯಕತ್ವವನ್ನು ವಹಿಸಿ ಸರ್ಕಾರವನ್ನು ಎಚ್ಚರಿಸಿದ್ದಾರೆ. ಕನ್ನಡವನ್ನು ಕಟ್ಟುವ ಜೊತೆಗೆ ರಾಷ್ಟ್ರವನ್ನು ಕಟ್ಟುವ ಉಗ್ರವಾದ ಕಾಲ, ಆ ಸನ್ನಿವೇಶ ಇವರಿಗೆ ಒದಗಿ ಬಂದಿತ್ತು. ಅಧ್ಯಾಪಕನಾಗಿದ್ದುಕೊಂಡು ವಿವಿಧ ಕಾಲೇಜುಗಳಲ್ಲಿ ವಿವಿಧ ಕಡೆ ವಿವಿಧ ಉನ್ನತ ಹುದ್ದೆಯಲ್ಲಿದ್ದುಕೊಂಡು ಒಬ್ಬ ವ್ಯಕ್ತಿ ಮುಟ್ಟಬಹುದಾದ ಅತ್ಯುನ್ನತ ಹುದ್ದೆಯಾದ ಉಪಕುಲಪತಿ ಹುದ್ದೆಗೆ ತಲುಪಿದರು, ಎಂದು ಸಿಎನ್‌ಆರ್ ಅವರು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದುಕೊಂಡು ವಿವಿಧ ಭಾರತೀಯ ಭಾಷೆಗಳ ನಡುವಿನ ವೈರುಧ್ಯಗಳನ್ನು ತೊಡೆದು ಹಾಕಲು ಹೋರಾಡಿದರು ಎಂದು ಹೇಳಿದರು. ಜೊತೆಗೆ ಅವರು ವಿಲ್ಲಿಂಗ್ಡನ್ ಕಾಲೇಜು, ಪುಣೆಯ ಫರ್ಗುಸನ್ ಕಾಲೇಜು, ವೀಸ್ ನಗರದ ಕಾಲೇಜು, ಕೊಲ್ಲಾಪುರದ ರಾಜರಾಮ್ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದಿನ ಇಂಗ್ಲಿಷ್ ಮತ್ತು ವಿದೇಶಿಭಾಷೆಗಳ ಕೇಂದ್ರ ಸಂಸ್ಥೆ, ಶಿಮ್ಲಾದಲ್ಲಿರುವ ಉನ್ನತ ಅಧ್ಯಯನ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಶ್ರೀ ಸತ್ಯಸಾಯಿ ಉನ್ನತ ಅಧ್ಯಯನ ಸಂಸ್ಥೆಯ ಉಪಕುಲಪತಿ ಹೀಗೆ ಅನೇಕ ಹುದ್ದೆಗಳಲ್ಲಿದ್ದುಕೊಂಡು ಕನ್ನಡವನ್ನು ಕಟ್ಟಿದ ಬಗೆಯನ್ನು ಡಾ. ಸಿಎನ್‌ಆರ್ ವಿವರಿಸಿದರು.

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂರವರು ಮಾತನಾಡುತ್ತಾ ಡಾ. ವಿ.ಕೃ. ಗೋಕಾಕ್ ಅವರು ಒಬ್ಬ ಸಾಹಿತ್ಯೋಪಾಸಕ. ಅಧ್ಯಯನ ಮಾಡಲೇಬೇಕಾದ ಸಾಹಿತ್ಯವನ್ನು ಬರೆದ ಒಬ್ಬ ಮಹತ್ತರವಾದ ಲೇಖಕ ಹಾಗೂ ಕನ್ನಡ ಸಾಹಿತ್ಯದ ಧೀಮಂತ ಚೇತನ ಎಂದರು.

ಸರಳವಾಗಿ ಸರಾಗವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲ ಪಾಂಡಿತ್ಯ ಗೋಕಾಕ್ ಅವರಿಗೆ ಸಿದ್ಧಿಸಿತ್ತು. ಕನ್ನಡ ಸಾಹಿತ್ಯವನ್ನು, ಕನ್ನಡವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಬೇಕೆಂಬ ಹಂಬಲ ಸದಾ ಅವರನ್ನು ಕಾಡುತ್ತಿತ್ತು. ಕನ್ನಡದ ಅತ್ಯಂತ ಪ್ರತಿಭಾವಂತ ಲೇಖಕರು ಅವರಾಗಿದ್ದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಕನ್ನಡದ ಪ್ರಥಮ ವ್ಯಕ್ತಿ. ಅವರ ಒಟ್ಟು ಸಾಹಿತ್ಯದ ತಿರುಳು ಅಥವಾ ಮುಖ್ಯ ಉದ್ದೇಶ ಪೂರ್ಣತೆಯತ್ತ ಸಾಗುವುದು ಎಂದು ನರಹಳ್ಳಿ ಅವರು ತಿಳಿಸಿದರು.

ಪ್ರಯೋಗಶೀಲತೆ ಗೋಕಾಕ್ ಅವರ ಬರಹಗಳಲ್ಲಿ ಎದ್ದು ಕಾಣುವ ವಿಶೇಷ ನುಡಿ ಎಂದ ನರಹಳ್ಳಿ ಬಾಲಸುಬ್ರಹ್ಮಣ್ಯಂ, ಗೋಕಾಕ್ ಅವರು ಮಹಾಕಾವ್ಯ ‘ಭಾರತ ಸಿಂಧೂರಶ್ಮಿ’ಗೆ ಒಂದು ಹೊಸತರನಾದ ಋಗ್ವೇದದ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡು ಮಹಾಕಾವ್ಯ ಬರೆದ ಮೊದಲ ಕನ್ನಡದ ಕವಿ ಎಂದರು. ಈ ಮಹಾಕಾವ್ಯದಲ್ಲಿ ವೃತ್ತಿ ವಿಕಸನದ ಕಥೆ ಇದೆ ಹಾಗೂ ಋಗುಷ್ಯೇತಿಹಾಸದ ಒಳಿತು ಕೆಡುಕಿನ ವಿವರಣೆ, ಸಂಘರ್ಷ ಇದೆ. ಪರಂಪರೆ ಮತ್ತು ಹೊಸತನವನ್ನು ಒಟ್ಟಿಗೆ ಮೇಳೈಸಿಕೊಂಡು, ಒಪ್ಪಿಕೊಂಡು ಬದುಕಿದ ಬರಹಗಾರ ಅವರಾಗಿದ್ದರು. ಅವರ ಸಮಗ್ರಗೀತೆಗಳು ಎಂಬ ಕವನ ಸಂಕಲನದಿಂದಲೇ ನವ್ಯಮಾರ್ಗಕ್ಕೆ ನಾಂದಿಯಾಯಿತು ಎಂದು ನರಹಳ್ಳಿ ಅವರು ಅಭಿಪ್ರಾಯಪಟ್ಟರು. ‘ಇಲ್ಲೇ ಇರು, ಅಲ್ಲಿಗೆ ಹೋಗಿ ಮಲ್ಲಿಗೆಯನು ತರುವೆನು’ ಎಂದು ಹೇಳುವ ಅವರ ನವೋದಯ ವಿಚಾರವನ್ನು ತಿಳಿಯಬಹುದಾಗಿದೆ. ‘ಕೊಡದಿರು ಶರಧಿಗೆ ಷಟ್ಪದಿಯ ಧೀಕ್ಷೆಯನು’ ಎಂಬ ವಿಚಾರವನ್ನು ನಂಬಿ ಬದುಕಿದ ಮಹಾನ್ ಲೇಖಕ ಅವರು ‘ಸಮರಸವೇ ಜೀವನ’ ಅವರ ಆಧುನಿಕ ಕಾವ್ಯ. ಅವರ ‘ಜನನಾಯಕ’ ಒಂದು ಒಳ್ಳೆಯ ನಾಟಕ. 1936ರಲ್ಲೇ ಅವರ ಕಾವ್ಯದಲ್ಲಿ ನವ್ಯತೆಯ ಬಗೆಗಿನ ಮಹತ್ವತೆಯನ್ನು ಹೇಳಿದ್ದರು.

ಗೋಕಾಕರ ಜೀವನ ಮಹತ್ವದ ವಿಚಾರವೆಂದರೆ, ವರಕವಿ ಬೇಂದ್ರೆಯವರು ಅವರಿಗೆ ಗುರು ಮತ್ತು ಗೆಳೆಯರಾಗಿ ಒದಗಿ ಬಂದದ್ದು ಎಂದು ತಿಳಿಸುತ್ತಾ ದೆಹಲಿ ಕರ್ನಾಟಕ ಸಂಘ ಈ ರೀತಿಯ ಸಾಹಿತ್ಯದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ನರಹಳ್ಳಿ ಅವರು ಶ್ಲಾಘಿಸಿದರು. ಹಾಗೆಯೇ ದೆಹಲಿ ಕರ್ನಾಟಕ ಸಂಘವು ಕನ್ನಡ ಸಾಹಿತ್ಯ ಸಂಪತ್ತನ್ನು ಬೇರೆ ಜಗತ್ತಿಗೆ ಪರಿಚಯಿಸಬೇಕಾದ ಮಹತ್ತರವಾದ ಕಾರ್ಯವನ್ನು ಹಮ್ಮಿಕೊಳ್ಳುತ್ತಿರಬೇಕೆಂದು ಆಗ್ರಹಿಸಿದರು.

ಕಾರ್ಯಕ್ರಮವನ್ನು ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್ ನಿರ್ವಹಿಸಿದರು. ಗೋಷ್ಠಿಗೆ ಆಗಮಿಸಿದ ಎಲ್ಲರಿಗೂ ಪಿ.ಸಿ. ಶ್ರೀನಿವಾಸ್ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

*ಪಿ.ಸಿ. ಶ್ರೀನಿವಾಸ್*

# ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ. ಸಿ.ಎನ್. ರಾಮಚಂದ್ರನ್ ಅವರಿಗೆ ಅಭಿನಂದನೆ



ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕನ್ನಡದ ಪ್ರಖ್ಯಾತ ಬರಹಗಾರ ಡಾ. ಸಿ.ಎನ್. ರಾಮಚಂದ್ರನ್ ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಮಾರ್ಚ್ 12ರಂದು ಆಯೋಜಿಸಲಾಗಿತ್ತು. ಡಾ. ಪುರುಷೋತ್ತಮ ಬಿಳಿಮಲೆ ಅವರು ಅಭಿನಂದನಾ ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಡಾ. ಸಿ.ಎನ್. ರಾಮಚಂದ್ರನ್ ಅವರ ವಿಮರ್ಶೆಯ ಅನನ್ಯತೆಯ ಕುರಿತು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರು ಮಾತಾಡಿ 'ಸಿ.ಎನ್. ರಾಮಚಂದ್ರನ್ ಅವರು ಇಂಗ್ಲಿಷ್ ಮತ್ತು ಕನ್ನಡ ಸಾಹಿತ್ಯವನ್ನು ತುಂಬಾ ವಿಸ್ತಾರವಾಗಿ ಅಧ್ಯಯನ ಮಾಡಿದ ಲೇಖಕ, ಅವರ ಬರಹಗಳಲ್ಲಿ ಭೌದ್ಧಿಕ ಪ್ರದರ್ಶನವಿರುವುದಿಲ್ಲ. ಅವರ ನೆಲ ಸಂಸ್ಕೃತಿಯ ಬಗೆಗಿನ ಪ್ರೀತಿ ಮಹತ್ತರವಾದದ್ದು, ಜಗತ್ತು ಪರ್ಯಾಯ ಸಂಸ್ಕೃತಿಯ ಸಂದರ್ಭದಲ್ಲಿರುವ ಕಾಲದಲ್ಲಿ ನೆಲ ಸಂಸ್ಕೃತಿಯ ಬಗೆಗಿನ ಚಿಂತನೆ ಎಲ್ಲರೂ ಮೆಚ್ಚುವಂತಹದ್ದು. ತಮ್ಮ ಸುಧೀರ್ಘ ವೃತ್ತಿ ಜೀವನ ಹಾಗೂ ಅಲೆಮಾರಿ ಬದುಕಿನಲ್ಲಿ ಕಳೆದುಹೋದ ಜೀವರತ್ನವನ್ನು ಹುಡುಕುವ ಪ್ರಯತ್ನವನು ತಮ್ಮ 'ಶೋಧ' ಎಂಬ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಅವರ ಅತ್ಯುತ್ತಮ ಕಥೆ 'ಕಸಾಂದ್ರ', ಅವರು ಇಂಗ್ಲಿಷಿಗೆ ಅನುವಾದಿಸಿದ "ಮಂಟೆಸ್ವಾಮಿ" ಎಂಬ ಕೃತಿ ಮತ್ತು ಆತ್ಮ ಕಥನವಾದ "ನೆರಳುಗಳ ಬೆನ್ನುಹತ್ತಿ" ಕನ್ನಡ ಸಾಹಿತ್ಯಕ್ಕೆ ಸಿಎನ್‌ಆರ್ ನೀಡಿದ ಮಹತ್ವದ ಕೊಡುಗೆಗಳು' ಎಂದು ಅವರು ಹೇಳಿದರು. 'ಇಂಥ ಮಹತ್ವದ ಮತ್ತು ಒಳ್ಳೆಯ ವ್ಯಕ್ತಿತ್ವವುಳ್ಳ ಅತ್ಯುತ್ತಮ ಬರಹಗಾರನಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿರುವುದಕ್ಕೆ ನನಗೆ ತುಂಬಾ ಹರ್ಷವಾಗುತ್ತಿದೆ' ಎಂದು ಅವರು ಸಿಎನ್‌ಆರ್ ಅವರನ್ನು ಅಭಿನಂದಿಸಿದರು.

ಅಭಿನಂದನೆಗೆ ಸಂತೋಷವನ್ನು ಪ್ರಕಟಪಡಿಸಿದ ರಾಮಚಂದ್ರನ್ ದೆಹಲಿ ಕರ್ನಾಟಕ ಸಂಘದ ಜೊತೆಗಿನ ತಮ್ಮ ಆತ್ಮೀಯ ಸಂಬಂಧವನ್ನು ನೆನಪಿಸಿಕೊಳ್ಳುತ್ತಾ 'ಜೀವನದುದ್ದಕ್ಕೂ ಕಲಿಯುತ್ತಾ ಬಂದಿರುವುದೇ ನನಗೆ ನಿರಂತರ ಖುಶಿಕೊಟ್ಟ ಸಂಗತಿ, ನನ್ನ ವೃತ್ತಿ ಜೀವನವನ್ನು ಅಮೇರಿಕ, ಸೊಮಾಲಿಯಾ, ಸೌದಿ ಅರೇಬಿಯಾಗಳಲ್ಲಿ ಕಳೆದು ಕೊನೆಗೆ ಕನ್ನಡದ ಕೈಂಕರ್ಯದಲ್ಲಿ ತೊಡಗಿಸಿಕೊಂಡೆ, ಇದು ನನಗೆ ತೃಪ್ತಿ ತಂದಿದೆ' ಎಂದು ಹೇಳಿದರು.

ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಪಿ.ಸಿ. ಶ್ರೀನಿವಾಸ ನಿರ್ವಹಿಸಿದರು. ಕೋಶಾಧಿಕಾರಿ ಡಾ. ಅವನೀಂದ್ರನಾಥ್ ರಾವ್ ವಂದಿಸಿದರು. ಡಾ. ಸಿ.ಎನ್. ರಾಮಚಂದ್ರನ್ ಅವರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

**ಡಾ. ಸಿ ಎನ್ ರಾಮಚಂದ್ರನ್ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾಡಿದ ಅಭಿನಂದನಾ ಭಾಷಣದ ಆಯ್ದ ಅಂಶಗಳು**

ಡಾ. ಸಿ.ಎನ್. ರಾಮಚಂದ್ರನ್ (ಜನನ: 1936) ಅವರನ್ನು ನಾನು ಕಳೆದ ಸುಮಾರು 30 ವರ್ಷಗಳಿಂದ ಬಲ್ಲೆ. ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಅವರು ನನ್ನ ಹಿರಿಯ ಸಹೋದ್ಯೋಗಿಯಾಗಿದ್ದರು. ನಾನು ಕಂಡ ಅತ್ಯುತ್ತಮ ಮನುಷ್ಯರಲ್ಲಿ ಪ್ರೊ. ಸಿಎನ್‌ಆರ್ ಕೂಡಾ ಒಬ್ಬರು. ನಮಗೆಲ್ಲ ತಿಳಿದ ಹಾಗೆ, ಭಾರತದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಬೋಧಿಸುವ ಅಧ್ಯಾಪಕರು ಮತ್ತು ಅದನ್ನು ಕಲಿಯುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ದೇಸೀ ಭಾಷೆಗಳ ಬಗ್ಗೆ ಅಷ್ಟೇನು ಆಸಕ್ತಿ ತೋರಿಸುವುದಿಲ್ಲ. ಅವರ ಪಠ್ಯಕ್ರಮಗಳಲ್ಲಿ ದೇಸೀ ಭಾಷೆಗಳ ಬಗೆಗ ಉಲ್ಲೇಖಗಳು ಕಡಿಮೆ ಅಥವಾ ಇಲ್ಲ. ಒಂದು ವೇಳೆ ತೌಲನಿಕವಾಗಿ ಕಲಿಯಲೇ ಬೇಕಾದ ಪ್ರಸಂಗ ಬಂದರೆ ಅವರೆಲ್ಲ ಸಂಸ್ಕೃತ ಸಾಹಿತ್ಯ ಓದುತ್ತಾರೆಯೇ ಹೊರತು ದೇಸೀ ಭಾಷೆಗಳಲ್ಲಿ ಲಭ್ಯವಿರುವ ಅತ್ಯುತ್ತಮ ಕೃತಿಗಳನ್ನು ಅಭ್ಯಾಸ ಮಾಡುವುದಿಲ್ಲ. ಸಾಮಾನ್ಯವಾಗಿ ಆಂಗ್ಲ ಭಾಷಾ ವಿದ್ಯಾರ್ಥಿಗಳ ನಡುವೆ ಲೋಕಲ್ ಎಂಬುದು ಒಂದು ಬೈಗುಳದ ಅಥವಾ ತಿರಸ್ಕಾರದ ಪದ. ಹೀಗಿರುವಾಗ ಮೌಖಿಕ ರೂಪದಲ್ಲಿ ದೊರೆಯುವ ಸಾಹಿತ್ಯವನ್ನಂತೂ ಅವರು ಗಮನಿಸುವುದಾಗಲೀ ಓದುವುದಾಗಲೀ ಸಾಧ್ಯವೇ ಇಲ್ಲ. ಇದು ವಸಾಹತೀಕರಣ ತಂದಿತ್ತ ಬೌದ್ಧಿಕ ಸಮಸ್ಯೆಯಾದರೆ, ಇದಕ್ಕೆ ವ್ಯತಿರಿಕ್ತವಾಗಿ ದೇಸೀ ಭಾಷೆಗಳಲ್ಲಿ ಕೆಲಸ ಮಾಡುವ ವಿದ್ವಾಂಸರಿಗೆ ಇಂಗ್ಲಿಷ್ ಅಂದರೆ ಒಂದು ಬಗೆಯ ಭಯ, ಆತಂಕ. ಅವರಿಗೆ ಇಂಗ್ಲಿಷಿನ ಮೇಲೆ ಹಿಡಿತ ಕಡಿಮೆ ಅಥವಾ ಇಲ್ಲ. ಇದು ಇನ್ನೊಂದು ಬಗೆಯ ಬೌದ್ಧಿಕ ಸಮಸ್ಯೆ. ಈ ಎರಡೂ ಬಗೆಯ ಸಮಸ್ಯೆಗಳಿಂದಾಗಿ ನಮ್ಮ ತಿಳುವಳಿಕೆಯ ಲೋಕ ಸಂಕುಚಿತಗೊಂಡಿದೆ.

ಇಂಥ ದಯನೀಯವಾದ ಸಂದರ್ಭದಲ್ಲಿ ಡಾ. ಸಿ.ಎನ್. ರಾಮಚಂದ್ರನ್ ಅವರು ಮೇಲಿನ ಮಾತುಗಳಿಗೆ ಒಂದು ಅಪವಾದವಾಗಿ ಕಾಣ ಸಿಗುತ್ತಾರೆ. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಅವರಿಗೆ ಸಂಸ್ಕೃತದ ಬಗ್ಗೆಯೂ ತಿಳುವಳಿಕೆಯಿದೆ. ಜೊತೆಗೆ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳ ಕುರಿತೂ ಕುತೂಹಲವಿದೆ. ಈ ಕುತೂಹಲವು ಅವರ ಅಧ್ಯಯನ ಮತ್ತು ಬರೆವಣಿಗೆಗಳ ಕ್ಷಿತಿಜಗಳನ್ನು ಗಮನಾರ್ಹವಾಗಿ ಮತ್ತು ತುಂಬ ಭಿನ್ನವಾಗಿ ವಿಸ್ತರಿಸಿದೆ. ಸಂತೋಷದ ಸಂಗತಿ ಎಂದರೆ, ಸಂಸ್ಕೃತ ಓದಿಯೂ ಅವರು ಪುರೋಹಿಶಾಹೀ ಪರಂಪರೆಗೆ ಸೇರಲಿಲ್ಲ, ಇಂಗ್ಲಿಷ್ ಓದಿಯೂ ಅವರು ವಸಾಹತುಶಾಹಿಗಳಂತೆ ಮಾತಾಡಲಿಲ್ಲ, ಕನ್ನಡ ಓದಿಯೂ ಶುಷ್ಕ ಪಂಡಿತರಾಗುಳಿಯಲಿಲ್ಲ, ಜಾನಪದ ಓದಿಯೂ ಕೇವಲ ಸ್ಥಳೀಯತೆಗೆ ಅಂಟಿಕೊಂಡು ಕುಳಿತಿಲ್ಲ. ಬದಲು ಈ ಎಲ್ಲ ತಿಳುವಳಿಕೆಗಳ ಬಲದಿಂದ ಹೊಸ ಲೋಕವೊಂದನ್ನು ಕಟ್ಟಿದರು. ಇವರು ಉಳಿದ ಇಂಗ್ಲಿಷ್ ಪ್ರಾಧ್ಯಾಪಕರ ಹಾಗಲ್ಲ. ಸಂಸ್ಕೃತಿಯೊಂದರ ಅನೇಕ ಮುಖಗಳ ಬಗೆಗೆ ಅವರಿಗೆ ಕುತೂಹಲವಿದೆ. ಈ ಕುತೂಹಲವೇ ಅವರನ್ನು ನಮ್ಮ ನಡುವಿನ ವಿಶಿಷ್ಟ ವ್ಯಕ್ತಿಯನ್ನಾಗಿ ರೂಪಿಸಿದೆ. ಅವರು ಬರೆದ ಶೋಧ, ಕಸಾಂದ್ರ, ಶಿಲ್ಪ ವಿನ್ಯಾಸ, ಸ್ವರೂಪ, ಆಶಯ ಆಕೃತಿ, ವಸಾಹತೋತ್ತರ ಚಿಂತನೆ, ಪರಂಪರೆ–ಪ್ರತಿರೋಧ, ಬಯಲು ರೂಪ, ಹೊಸ ಮಡಿಯ ಮೇಲೆ ಚದುರಂಗ, ರಕ್ತಿ ರೂಪಣೆ, ಪ್ರಮಾಣ ಮತ್ತು ಪರಿಪ್ರೇಕ್ಷ್ಯ, ಆಖ್ಯಾನ–ವ್ಯಾಖ್ಯಾನ ಮೊದಲಾದ ಕೃತಿಗಳಲ್ಲಿ ಇದು ಸ್ಪಷ್ಟವಾಗುತ್ತದೆ.

ಈ ಕೃತಿಗಳಲ್ಲಿ ಅವರು ಸಂಸ್ಕೃತಿಯ ಬಗ್ಗೆ ಮಾತಾಡುವಾಗ ಇತರ ಅನೇಕರು ಮಾಡುವಂತೆ ಎಲ್ಲವನ್ನು ಸಮ್ಮಿಶ್ರಗೊಳಿಸಿ ಗೊಂದಲಗೊಳಿಸುವುದೂ ಇಲ್ಲ, ಸರಳಗೊಳಿಸುವುದೂ ಇಲ್ಲ. ಬದಲು, ತನ್ನ ಗೃಹಿಕೆಗಳನ್ನು ಮತ್ತು ಬರೆಹದ ಚೌಕಟ್ಟನ್ನು ಮೊದಲೇ ಖಚಿತಪಡಿಸಿಕೊಂಡು, ಮುಂದೆ ಸಾಗುತ್ತಾರೆ. ಆ ಹಾದಿಯಲ್ಲಿ ನಡೆಯುತ್ತಾ ತಾನು ಏನನ್ನು ಹೇಳಬೇಕಾಗಿದೆಯೋ ಅದನ್ನು ಸುಲಲಿತವಾಗಿ ಪ್ರತೀತಗೊಳಿಸುತ್ತಾರೆ. ಜೊತೆಗೆ, ಎಲ್ಲವನ್ನೂ ಬಿಡಿ ಬಿಡಿಯಾಗಿ ನೋಡುವ ಕಾಲದಲ್ಲಿರುವ ನಮಗೆ ಭಗವದ್ಗೀತೆ, ವಾಲ್ಮೀಕಿ ರಾಮಾಯಣ, ಆಭಿಜ್ಞಾನ ಶಾಕುಂತಲಂ, ಸ್ತ್ರೀ ವಾದ, ಸೃಷ್ಟಿ ಪುರಾಣ, ಪರ್ಯಾಯ ನಿರೂಪಣೆಗಳು, ಕನ್ನಡ ಸಾಹಿತ್ಯ, ಕಾವ್ಯ ಮೀಮಾಂಸೆ, ಮಂಟೇಸ್ವಾಮಿ ಮೊದಲಾದ ಸಂಸ್ಕೃತಿಯೊಂದರ ವಿಭಿನ್ನ ಅಭಿವ್ಯಕ್ತಿ ಕ್ರಮಗಳ ಬಗೆಗೆ ಸಮಗ್ರವಾಗಿ ಯೋಚಿಸಬಲ್ಲ ಮತ್ತು ಬರೆಯಬಲ್ಲ ವಿದ್ವಾಂಸರು ಸಿಗುವುದೇ ಅಸಾಧ್ಯ ಆದರೆ ಕನ್ನಡದ ಪುಣ್ಯವೋ ಎಂಬಂತೆ ನಮಗೊಬ್ಬ ಸಿಎನ್‌ಆರ್ ದೊರೆತಿದ್ದಾರೆ. ಅವರು ತಮ್ಮ ನಿರಂತರ ಅಧ್ಯಯನ, ಬರೆವಣಿಗೆ, ಭಾಷಣ, ಪ್ರಕಟಣೆ, ಅನುವಾದ, ಸಹಜ ಕುತೂಹಲ ಮತ್ತಿತರ ದಣಿವರಿಯದ ಚಟುವಟಿಕೆಗಳಿಂದ ನಮ್ಮ ಅರಿವಿನ ವಲಯಗಳನ್ನು ಗಮನಾರ್ಹವಾಗಿ ವಿಸ್ತರಿಸಿದ್ದಾರೆ. ಅದಕ್ಕೆ ನಾವು ಕನ್ನಡಿಗರು ಅವರಿಗೆ ಋಣಿಗಳಾಗಿದ್ದೇವೆ' ಅ

*ಪಿ ಸಿ ಶ್ರೀನಿವಾಸ್*



# ದೇವದಾಸ ಶೆಟ್ಟಿ ಅವರ ವರ್ಣಚಿತ್ರಗಳ ಪ್ರದರ್ಶನ





**ಮುಂ**ಬಯಿಯ ಪ್ರಖ್ಯಾತ ಚಿತ್ರಕಲಾವಿದ ದೇವದಾಸ ಶೆಟ್ಟಿ ಅವರ ಚಿತ್ರಕಲಾ ಪ್ರದರ್ಶನವು ಮಾರ್ಚ್ 7ರಿಂದ 9ರವರೆಗೆ ದೆಹಲಿ ಕರ್ನಾಟಕ ಸಂಘದ ಆರ್ಟ್‌ಗ್ಯಾಲರಿಯಲ್ಲಿ ಪ್ರದರ್ಶನಗೊಂಡಿತು.

ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಸಿ ಮಾತನಾಡಿದ ಕೇಂದ್ರದ ಮಾಜಿ ಸಚಿವರಾದ ಶ್ರೀ ಬಾಬಾಗೌಡ ಪಾಟೀಲ ಅವರು "ಕಲೆಯು ಆದಿ ಮಾನವನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಮನುಷ್ಯನ ಬುದ್ಧಿ ಮತ್ತು ಭಾವನೆಗಳಿಗೆ ಅಭಿವ್ಯಕ್ತಿ ನೀಡುತ್ತಾ ಬಂದಿದೆ. ಆದರೆ ಈಚಿನ ಕಾಲದಲ್ಲಿ ಈ ಅಭಿವ್ಯಕ್ತಿ ಕ್ರಮವು ಸಂಕೀರ್ಣವಾಗುತ್ತಿದೆ" ಎಂದು ಹೇಳಿದರು.

ಕಲಾವಿದ ದೇವದಾಸ ಶೆಟ್ಟಿಯವರು ಮಾತನಾಡಿ "ಬಡತನದಲ್ಲಿ ಬೆಳೆದ ನಾನು ಕಲೆಯನ್ನು ಆಧರಿಸಿಯೇ ಬದುಕಲು ನಿರ್ಧರಿಸಿದೆ, ನನ್ನ ಚಿತ್ರಗಳಿಗೆ ನನ್ನ ತಾಯಿ ಹೇಳಿದ ಕತೆಗಳು, ಅಜ್ಜಿ ಹೇಳಿದ ಘಟನೆಗಳು, ಬಡತನ ಇವೆಲ್ಲಾ ಪ್ರೇರಣೆ ನೀಡಿವೆ" ಎಂದು ಹೇಳಿ ತನ್ನ ಕೆಲವು ಚಿತ್ರಗಳ ಅಭಿವ್ಯಕ್ತಿ ಕ್ರಮದ ವಿಶಿಷ್ಟತೆಯ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹಾಜರಿದ್ದ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆಯವರು ದೇವದಾಸ ಶೆಟ್ಟಿಯವರ ಕಲಾಕೃತಿಗಳ ವೈಶಿಷ್ಟ್ಯಗಳ ಬಗ್ಗೆ ಮಾತನಾಡುತ್ತ "ಶೆಟ್ಟಿ ಅವರು ಗ್ರಾಮೀಣ ಅನುಭವಗಳನ್ನು ತನ್ನದೇ ಆದ ಹೊಸ ಭಾಷೆ ಮತ್ತು ರೂಪಕಗಳ ಮೂಲಕ ಸೃಜಿಸಿ ನಗರದ ಪ್ರೇಕ್ಷಕರಿಗೆ ನವೀನ ಅನುಭವವನ್ನು ನೀಡುತ್ತಿದ್ದಾರೆ. ಕಡು ಬಣ್ಣಗಳನ್ನು ಮೃದುಗೊಳಿಸುವ ಅವರ ನೈಪುಣ್ಯ ವಿಶೇಷವಾದುದು" ಎಂದು ಹೇಳಿದರು.





ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು "ಹೊರನಾಡ ಕನ್ನಡಿಗರೊಬ್ಬರು ನಮ್ಮ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಪ್ರದರ್ಶನ ನೀಡುವುದು ಇದೇ ಮೊದಲ ಸಲ" ಎಂದು ಹೇಳಿ ದೇವದಾಸ ಶೆಟ್ಟಿಯವರ ಸಹಕಾರವನ್ನು ನೆನಪಿಸಿಕೊಂಡರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಆನಂದ ಮುರಗೋಡ ಅವರು ಕಾರ್ಯಕ್ರಮ ನಿರ್ವಹಿಸಿದರು. ಈ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಹಾಜರಿದ್ದರು ಮತ್ತು ಚಿತ್ರಕಲಾವಿದ ಸುಧೀರ್ ಫಡ್ನೀಸ್ ಸಹಕರಿಸಿದರು. ಅ

# ರಕ್ತದಿಂದ ಚಿತ್ರ ಬರೆಯುವ ಸಂಗಮೇಶ ಬಗಲಿ



ವಿವಿಧ ಆರ್ಟ್ ಗ್ಯಾಲರಿಗಳಲ್ಲಿ ನಡೆಯುವ ಕಲಾ ಪ್ರದರ್ಶನಗಳಲ್ಲಿ ಕ್ಯಾನ್‌ವಾಸ್, ಗಾಜು ಹಾಗೂ ಪೇಪರ್‌ಗಳ ಮೇಲೆ ವಿವಿಧ ಪ್ರಕಾರದ ಬಣ್ಣಗಳಿಂದ ಬಿಡಿಸುವ ಚಿತ್ರಕಲೆಗಳನ್ನು ವೀಕ್ಷಿಸುತ್ತಿರುತ್ತೇವೆ. ಆದರೆ ಇದೇ ಮಾರ್ಚ್ 21ರಂದು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿ ಒಂದು ವಿಭಿನ್ನ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಅದೇನೆಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬಲಿದಾನ ಕೊಟ್ಟ ಅಸಂಖ್ಯಾತ ಸ್ವಾತಂತ್ರ್ಯ ಸೇನಾನಿಗಳಿಗೆ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ ಕಲಾವಿದ ಸಂಗಮೇಶ ಬಗಲಿ ಅವರು ತಮ್ಮ ದೇಹದಿಂದ ತೆಗೆದ ರಕ್ತದಲ್ಲಿ ಹುತಾತ್ಮರಾದ ಸ್ವಾತಂತ್ರ್ಯ ಸೇನಾನಿಗಳ ಚಿತ್ರಗಳನ್ನಲ್ಲದೆ ಭಾರತದ ಮಹಾನ್ ವ್ಯಕ್ತಿಗಳ ಚಿತ್ರಗಳನ್ನು ರಚಿಸಿ ತಮ್ಮ ದೇಶಾಭಿಮಾನವನ್ನು ಮೆರೆದಿರುವುದು.

ಈ ಏಕವ್ಯಕ್ತಿ ಕಲಾಪ್ರದರ್ಶನವನ್ನು ಸಪ್ದರ್‌ಜಂಗ್ ಆಸ್ಪತ್ರೆ ಹಾಗೂ ವರ್ಧಮಾನ ವೈದ್ಯಕೀಯ ಮಹಾವಿದ್ಯಾಲಯದ ಹೆಚ್ಚುವರಿ ಮಹಾನಿರ್ದೇಶಕರು ಹಾಗೂ ಮೆಡಿಕಲ್ ಸುಪರಿಂಟೆಂಡೆಂಟ್ ಡಾ. ಬಿ.ಡಿ. ಅಥಣಿ ಅವರು ದೀಪ ಬೆಳಗಿ ಉದ್ಘಾಟಿಸಿದರು. ದೆಹಲಿಯ ಹಿರಿಯ ಕಲಾವಿದ ಭೀಮರಾವ್ ಮುರಗೋಡ, ಸಂಗಮೇಶ ಬಗಲಿ ಅವರ ಗುರು ಮತ್ತು ಮಾರ್ಗದರ್ಶಕ ವಿದ್ಯಾಧರ ಎಸ್. ಸಾಲಿ, ಉಪನ್ಯಾಸಕರು, ಶ್ರೀ ಸಿದ್ದೇಶ್ವರ ಪಿ.ಯು. ಕಾಲೇಜು, ವಿಜಾಪುರ, ಕಲಾವಿದ ಸುಧೀರ್ ಫಡ್ನೀಸ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಕಲಾಭಿಮಾನಿಗಳು ಉಪಸ್ಥಿತರಿದ್ದರು.

ಇಂಡಿ ತಾಲೂಕಿನ ನೀವರಗಿ ಎಂಬ ಪುಟ್ಟ ಗ್ರಾಮದಲ್ಲಿ 1968ರ ಫೆಬ್ರವರಿ 11ರಂದು ಹುಟ್ಟಿದ ಸಂಗಮೇಶ ಬಗಲಿ ಅವರು ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಪೂರೈಸಿ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಈಗ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು ಮಕ್ಕಳಿಗೆ ಚಿತ್ರಕಲೆಯ ಜೊತೆಗೆ ರಾಷ್ಟ್ರ ಹಾಗೂ ರಾಷ್ಟ್ರಾಭಿಮಾನದ ಬಗ್ಗೆ ಉದಾತ್ತ ಕಲ್ಪನೆ ಬರುವ ರೀತಿಯಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ದೇಶ ಸ್ವಾತಂತ್ರ್ಯ ಗಳಿಸಲು ದೇಶಭಕ್ತರು ಹರಿಸಿದ ನೆತ್ತರಿನ ಬೆಲೆ ಕಂಡು ಕೇಳಿ ಭಾವಪರವಶರಾಗಿ ತಮ್ಮ ರಕ್ತವನ್ನೇ ಕಲಾಕೃತಿ ರಚಿಸಲು ಬಳಸಿ ತಮ್ಮ ರಾಷ್ಟ್ರಪ್ರೇಮವನ್ನು ಮೆರೆಸಿ ಭರತವರ್ಷ ಕಂಡ ಖ್ಯಾತ ಪ್ರಖ್ಯಾತರ ಭಾವಚಿತ್ರ ರಚಿಸಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ. ದೇಶದಲ್ಲಿ ಪ್ರಥಮ ಪ್ರಯತ್ನ ಎನ್ನಬಹುದಾದ ಅದ್ಭುತ ಹಾಗೂ ವಿನೂತನ ಪ್ರಯೋಗದ ರೂವಾರಿ ಸಂಗಮೇಶ ಬಗಲಿ ಅವರು. ರಕ್ತದಲ್ಲಿ ಬಿಡಿಸಿದ ಈ ಚಿತ್ರಗಳು ಮಾರಾಟಕ್ಕಿಲ್ಲ. ಸಂಗಮೇಶ್ ರಚಿಸಿರುವ ಚಿತ್ರಗಳಲ್ಲಿ ಒಂದೊಂದು ಚಿತ್ರಕ್ಕೂ ಹೆಚ್ಚುಕಮ್ಮಿ 6 ರಿಂದ 7 ಮಿಲಿ ಲೀಟರ್ ರಕ್ತ ಬಳಕೆಯಾಗಿದೆ. ಶೇಡಿಂಗ್ ಜಾಸ್ತಿ ಇದ್ದಲ್ಲಿ 10 ಮಿಲಿ ಲೀಟರ್‌ವರೆಗೆ ಹೋಗುತ್ತದೆ. ಇದುವರೆಗೆ ರಚಿಸಿರುವ 70 ಚಿತ್ರಗಳಿಗೆ ಒಟ್ಟು ಒಂದೂವರೆ ಲೀಟರ್ ರಕ್ತವನ್ನು ಅವರು ತಮ್ಮ ದೇಹದಿಂದ ತೆಗೆದಿದ್ದಾರೆ. ಅ

***ಶಿವಾನಂದ ಇಂಗಳೇಶ್ವರ***










ಕಲಾವಿದ ಸಂಗಮೇಶ ಬಗಲಿಯವರ ಚಿತ್ರಕಲಾ ಪ್ರದರ್ಶನದಲ್ಲಿ ದೇಶಭಕ್ತರ, ಸಾಹಿತಿಗಳ, ಕಲಾವಿದರ ಚಿತ್ರಗಳನ್ನು ರಕ್ತ, ಆಯಿಲ್ ಪೇಯಿಂಟ್, ವಾಟರ್ ಕಲರ್‌ನಿಂದ ಬಿಡಿಸಿದ್ದಾರೆ. ಮಹಾತ್ಮಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ, ಭಗತ್ ಸಿಂಗ್, ಸುಭಾಷ್‌ಚಂದ್ರ ಭೋಸ್, ವೀರ ಸಾವರ್‌ಕರ್, ಡಾ. ರಾಧಾಕೃಷ್ಣ, ರವೀಂದ್ರನಾಥ ಠಾಗೋರ್, ಝಾನ್ಸಿರಾಣಿ, ಬಾಲಗಂಗಾಧರ ತಿಲಕ್, ಬಿ.ಡಿ. ಜತ್ತಿ, ಡಾ. ಅಬ್ದುಲ್ ಕಲಾಂ ಹೀಗೆ 20ಕ್ಕೂ ಹೆಚ್ಚಿನ ಚಿತ್ರಗಳು ಬಗಲಿ ಅವರ ರಕ್ತದಿಂದ ರಚಿತವಾದವು. ಒಂದೊಂದು ಚಿತ್ರವೂ ಕಲಾವಿದನ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಶಾಂತಿ ಸಂದೇಶವನ್ನು ಸಾರುವ, ದೇವದಾಸಿ, ನೃತ್ಯಗಾತಿಯ ಚಿತ್ರಗಳು ಆಯಿಲ್ ಪೇಯಿಂಟ್‌ನಿಂದ ರಚಿಸಲಾಗಿದೆ. ಒಟ್ಟಾರೆಯಾಗಿ ಚಿತ್ರಕಲಾ ಪ್ರದರ್ಶನವು ಚೆನ್ನಾಗಿತ್ತು. ಕಲಾವಿದನಿಗೆ ಇನ್ನೂ ಹೆಚ್ಚಿನ ಕಲಾಕೃತಿಗಳನ್ನು ತಮ್ಮ ರಕ್ತದಿಂದ ರಚಿಸುವ ಹುಮ್ಮಸಿದೆ. ಅ

***ಎಸ್.ಸಿ. ಹೇಮಲತಾ***



# ಸಂಘದಲ್ಲಿ ತುಳು ಸಂಭ್ರಮ

ದೆಹಲಿ ಕರ್ನಾಟಕ ಸಂಘವು ದೆಹಲಿ ತುಳು ಸಿರಿ ಮತ್ತು ಬಿಲ್ಲವರ ಅಸೋಸಿಯೇಷನ್ ಅವರ ಸಹಯೋಗದಲ್ಲಿ ಮಾರ್ಚ್ 23 ರಂದು ತುಳು ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಿತ್ತು. ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬಿಲ್ಲವರ ಅಸೋಸಿಯೇಷನ್ ಅವರು ಪ್ರಕಾಶಿಸಿದ ಶ್ರೀ ನಾರಾಯಣ ಗುರು ವಿಜಯ ದರ್ಶನ ಕೃತಿಯನ್ನು ಬಿಡುಗಡೆ ಮಾಡಲಾಯಿತು. ನಾಡಿನಾದ್ಯಂತ ಪ್ರಸಿದ್ಧವಾಗಿರುವ ಸಾಗರ್ ಹೋಟೆಲ್ ಗ್ರೂಪ್‌ನ ಮಾಲೀಕರಾದ ಶ್ರೀ ಜಯರಾಮ ಬನಾನ್ ಅವರು ಪುಸ್ತಕವನ್ನು ಬಿಡುಗಡೆ ಮಾಡಿದರು.
ಈ ಸಂದರ್ಭದಲ್ಲಿ ನಾರಾಯಣಗುರು ವಿಜಯ ದರ್ಶನ ಕೃತಿಯನ್ನು ಮೂಲತಃ ಕನ್ನಡದಲ್ಲಿ ಬರೆದ ಶ್ರೀ ಬಾಬು ಶಿವ ಪೂಜಾರಿ ಅವರು ಮಾತಾಡಿ, 'ಶ್ರೀ ನಾರಾಯಣ ಗುರುಗಳು ಭಾರತೀಯ ಸಾಂಪ್ರದಾಯಕ ತಿಳುವಳಿಕೆಯನ್ನು ಪ್ರಶ್ನಿಸಿ ಶೂದ್ರ ವರ್ಗಕ್ಕೆ ನ್ಯಾಯ ಒದಗಿಸಲು ಹೋರಾಡಿದರು' ಎಂದು ಹೇಳಿ ಶ್ರೀ ಗುರುಗಳ ಸಾಧನೆಯ ಮಹತ್ವವನ್ನು ಸೋದಾಹರಣವಾಗಿ ವಿವರಿಸಿದರು.
ಮೂಲ ಕನ್ನಡ ಪುಸ್ತಕವನ್ನು ಆಂಗ್ಲ ಭಾಷೆಗೆ ಸೊಗಸಾಗಿ ಅನುವಾದಿಸಿದ ಲೇಖಕಿ  ಶ್ರೀಮತಿ ಶಶಿಲೇಖಾ ಬಿ. ಅವರು ಮಾತಾಡಿ, ಈ ಕೃತಿಯು ನನ್ನ ತಿಳುವಳಿಕೆಯ ಮೇಲೆ ಅಪಾರವಾದ ಪ್ರಭಾವ ಬೀರಿ, ನಾನು ಹೊಸದಾಗಿ ಯೋಚಿಸುವಂತೆ ಮಾಡಿದೆ, ಗುರುಗಳ ಮಾರ್ಗದರ್ಶನದಲ್ಲಿ ನಾನೀಗ ನಡೆಯುತ್ತಿದ್ದೇನೆ' ಎಂದು ಹೇಳಿ ಅನುವಾದ ಕಾರ್ಯದಲ್ಲಿ ನೆರವಾದವರನ್ನು ಸ್ಮರಿಸಿಕೊಂಡರು.
ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಲೇಖಕಿ, ಸಾಮಾಜಿಕ ಹೋರಾಟಗಾರ್ತಿ ಶ್ರೀಮತಿ ಬಿ.ಎಂ. ರೋಹಿಣಿ ಅವರು ಮಾತಾಡಿ ಕರಾವಳಿ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳು ಪಡುತ್ತಿರುವ ಕಷ್ಟಗಳನ್ನು ಮನಮುಟ್ಟುವಂತೆ ವಿವರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಾಬು ಶಿವ ಪೂಜಾರಿ, ಶ್ರೀಮತಿ ಶಶಿಲೇಖಾ ಬಿ. ಮತ್ತು ಶ್ರೀಮತಿ ಬಿ.ಎಂ. ರೋಹಿಣಿ ಅವರನ್ನು ಬಿಲ್ಲವರ ಅಸೋಸಿಯೇಷನ್ ವತಿಯಿಂದ ಶ್ರೀ ಜಯರಾಮ ಬನಾನ್ ಮತ್ತು ಶ್ರೀ ಪ್ರಭಾಕರ ಬಂಗೇರ ಅವರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ 'ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಎಲ್ಲ ಭಾಷೆಗಳಿಗೆ ಒಂದು ವೇದಿಕೆಯಾಗಬೇಕು ಎಂಬುದು ನನ್ನ ಆಸೆ. ಆ ಪ್ರಕಾರ ಇವತ್ತು ತುಳು ಕಾರ್ಯಕ್ರಮ ನಡೆಯುತ್ತಿದೆ, ಮುಂದೆ ಕೊಡವ ಮತ್ತು ಕೊಂಕಣಿ ಭಾಷೆಯ ಕಾರ್ಯಕ್ರಮಗಳೂ ನಡೆಯಲಿವೆ' ಎಂದು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲಿ ದೆಹಲಿ ತುಳು ಸಿರಿಯ ಸದಸ್ಯರು ಪೂಜಾ ಪ್ರದೀಪ್ ಅವರ ನೇತ್ರತ್ವದಲ್ಲಿ ತುಳು ಭಾವಗೀತೆಯೊಂದನ್ನು ಪ್ರಸ್ತುತ ಪಡಿಸಿದರು. ಡಾ. ಅವನೀಂದ್ರನಾಥ ರಾವ್ ಅವರು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದಿಸಿದರು.
ಆನಂತರ ನಡೆದ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಪ್ರಖ್ಯಾತ ಗಾಯಕ ಶ್ರೀ ಶಶಿಧರ ಕೋಟೆ ಅವರು ಶ್ರೀ ಅಮೃತ ಸೋಮೇಶ್ವರ ಮತ್ತು ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರ ತುಳು ರಚನೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರೇಕ್ಷಕರ ಕೋರಿಕೆ ಮೇರೆಗೆ ಕನ್ನಡ ಮತ್ತು ಹಿಂದಿ ಗೀತೆಗಳನ್ನೂ ಹಾಡಿ ಜನರನ್ನು ರಂಜಿಸಿದರು. ಅ



# ಕೊಡವ ಸಂಸ್ಕೃತಿ ಸಂಭ್ರಮ

ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಕೊಡವ (ಕೂರ್ಗ್) ಸಮಾಜದ ಸಹಯೋಗದಲ್ಲಿ ಮಾರ್ಚ್ 29ರಂದು 'ಕೊಡವ ಸಂಸ್ಕೃತಿ ಸಂಭ್ರಮ' ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಯುರೇಷಿಯಾದ ರಾಯಭಾರಿ ಶ್ರೀಮತಿ ರೀನಾ ಪೂವಯ್ಯ ಪಾಂಡೆಯವರು ಆಗಮಿಸಿದ್ದರು. ಅತಿಥಿಗಳು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟನೆಗೊಂಡಿತು.



ಕಲಾವಿದೆ ಅನಿತಾ ಕಾರ್ಯಪ್ಪನವರು ಕೊಡವ ನಾಡು ಹಾಗೂ ಕಾವೇರಿ ನದಿಯ ಕುರಿತ ಪ್ರಾರ್ಥನೆ ಗೀತೆಯನ್ನು ಹಾಡಿದರು. ಕೊಡವ (ಕೂರ್ಗ್) ಸಮಾಜದ ಅಧ್ಯಕ್ಷ ಎಂ. ಕಾರ್ಯಪ್ಪ ಅಪ್ಪಯ್ಯನವರು ಮುಖ್ಯ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು.

ಶ್ರೀಮತಿ ರೀನಾ ಪೂವಯ್ಯ ಪಾಂಡೆಯವರು ಕೊಡಗಿನ ಸಂಸ್ಕೃತಿ ಹಾಗೂ ಹಿರಿಮೆಯನ್ನು ತಿಳಿಸಿಕೊಟ್ಟರು. ಕರ್ನಾಟಕದಲ್ಲಿ ಕೊಡವ, ತುಳು, ಕೊಂಕಣಿ, ಕನ್ನಡ ಮೊದಲಾದ ವಿವಿಧ ಭಾಷೆಗಳು ಇದ್ದರೂ ಕನ್ನಡಿಗರಾದ ನಾವು ನಮ್ಮ ಎಲ್ಲಾ ಭಾಷೆಗಳಿಗೆ ಪ್ರೋತ್ಸಾಹಿಸುತ್ತಾ ಒಂದಾಗಿ ನಾಡಿನ ಹಿತಕ್ಕಾಗಿ ದುಡಿಯುತ್ತಿರುವುದು ಶ್ಲಾಘನೀಯದ ವಿಷಯವೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ಕರ್ನಾಟಕದ ಪ್ರಮುಖ ಭಾಷೆಯಾದ ಕೊಡಗು ಮತ್ತು ಅಲ್ಲಿನ ಸಂಸ್ಕೃತಿ ವಿಶಿಷ್ಟವಾಗಿದೆ. ಕೊಡಗಿನ ಈ ವಿಶಿಷ್ಟತೆಯನ್ನು ರಾಜಧಾನಿಯಲ್ಲಿ ನೆನಪಿಸುವ ಪ್ರಯತ್ನ ಮಾಡಿದ್ದೇವೆ ಎಂದು ವಿವರಿಸಿದರು.







ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾವೇರಿ ಕೊಡವ ಕೂಟ ಪೊನ್ನಂಪೇಟೆ ಕಲಾವಿದರಿಂದ ಪ್ರಸ್ತುತಗೊಂಡ ಕೊಡವ ಜಾನಪದ ನೃತ್ಯಗಳಾದ ಉಮ್ಮತ್ತಾಟ್, ಬೊಳಕಾಟ್, ಪುತ್ತರಿ ಕೋಲಾಟ್, ಕೊಡವ ಆಟ್, ಕೊಡವ ಪಾಟ್‌ಗಳು ಪ್ರೇಕ್ಷಕರ ಮನಸೂರೆಗೊಂಡವು. ಇದೇ ಸಂದರ್ಭದಲ್ಲಿ ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ತಾಯ್ನಾಡಿಗೆ ತೆರಳುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಪಿ.ಎಂ. ಗಣೇಶ್ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ಕಾವೇರಿ ಕೊಡವ ಕೂಟ ಪೊನ್ನಂಪೇಟೆ ಕಲಾವಿದರ ಜೊತೆಗೆ ಸ್ಥಳಿಯ ಕೊಡವ ಬಂಧುಗಳು ಜಾನಪದ ನೃತ್ಯದಲ್ಲಿ ಪಾಲ್ಗೊಂಡು ತಮ್ಮದೇ ಆದ ಕೊಡವ ನಾಡಿನಲ್ಲಿ ನೃತ್ಯ ಮಾಡಿದ ಅನುಭವವನ್ನು ಪಡೆದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಎಸ್.ಸಿ. ಹೇಮಲತ ಅವರು ನಿರ್ವಹಿಸಿದರು. ಅ

# ಸಂಘದಲ್ಲಿ ಸಡಗರದ ವಾರ್ಷಿಕೋತ್ಸವ




ದೆಹಲಿ ಕರ್ನಾಟಕ ಸಂಘದ 2013–14ನೇ ಸಾಲಿನ ವಾರ್ಷಿಕೋತ್ಸವವನ್ನು ಮಾರ್ಚ್ 30ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಂಗವಾಗಿ ಖ್ಯಾತ ಗಾಯಕಿ ನಾಡೋಜ ಡಾ. ಬಿ.ಕೆ. ಸುಮಿತ್ರ ಮತ್ತು ಸಂಗೀತ ನಿರ್ದೇಶಕ ಶ್ರೀ ಬಿ.ವಿ. ಶ್ರೀನಿವಾಸ್ ಅವರಿಂದ ಮೂರು ದಿನ ತರಬೇತಿ ಪಡೆದ ಶಿಬಿರಾರ್ಥಿಗಳಿಂದ ಸಂಗೀತ ಸಂಜೆ ಕಾರ್ಯಕ್ರಮ ನೆರವೇರಿತು. ಸುಮಾರು ಐವತ್ತಕ್ಕೂ ಹೆಚ್ಚು ದೆಹಲಿಯ ಕನ್ನಡಿಗರು ವಿಶೇಷ ಆಸಕ್ತಿಯಿಂದ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ತರಬೇತಿ ನೀಡಿದ ನಾಡೋಜ ಬಿ.ಕೆ. ಸುಮಿತ್ರ ಮತ್ತು ಶ್ರೀ ಬಿ.ವಿ. ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಮಾಂಡೆಂಟ್ ಎಸ್.ಡಿ.ಜಿ. ಶ್ರೀ ಪ್ರಭಾಕರ್ ತ್ರಿಪಾಠಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ವಾರ್ಷಿಕ ಕ್ರೀಡಾಕೂಟಕ್ಕೆ ಸಹಕರಿಸಿದ್ದ ಅವರು ಇನ್ನೂ ಮುಂದೆಯೂ ಆಟೋಟ ಸ್ಪರ್ಧೆಗಳಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡಿ ಸಹಕರಿಸುತ್ತೇವೆ ಎಂದು ಮುಕ್ತ ಕಂಠದಿಂದ ಹೇಳಿದರು.

ನಾಡೋಜ ಡಾ.ಬಿ.ಕೆ. ಸುಮಿತ್ರ ಮತ್ತು ಶ್ರೀ ಬಿ.ವಿ. ಶ್ರೀನಿವಾಸ್ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಜೊತೆಗಿನ ಆತ್ಮೀಯ ಸಂಬಂಧವನ್ನು ನೆನೆದರು.

ಶಿಬಿರಾರ್ಥಿಗಳ ಪರವಾಗಿ ಶ್ರೀಮತಿ ಪೂಜಾ ಪ್ರದೀಪ್ ಅವರು ತನ್ನ ಮೂರು ದಿನಗಳ ತರಬೇತಿಯ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಸದಸ್ಯರಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಕಾರ್ಯಕ್ರಮವನ್ನು ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು, ಉಪಾಧ್ಯಕ್ಷೆ ಶ್ರೀಮತಿ ಆಶಾಲತ, ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ನಡೆಸಿಕೊಟ್ಟರು. ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಗೀತ ತರಬೇತಿ ನೀಡಿದ ನಾಡೋಜ ಬಿ.ಕೆ. ಸುಮಿತ್ರ ಮತ್ತು ಶ್ರೀ ಬಿ.ವಿ. ಶ್ರೀನಿವಾಸ್ ಅವರಿಗೆ ಕೃತಜ್ಞತೆಯನ್ನು ಹೇಳಿದರು. ಅವರು ಬಹುಮಾನ ವಿಜೇತರನ್ನು ಅಭಿನಂದಿಸಿ ಮಾತನಾಡಿದರು. ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಸ್ವಾಗತಿಸಿದರು. ಜಂಟಿಕಾರ್ಯದರ್ಶಿಗಳಾದ ಶ್ರೀಮತಿ ಹೇಮಲತಾ ಅವರು ಕಾರ್ಯಕ್ರಮ ನಿರೂಪಿಸಿದರು ಮತ್ತು ಶ್ರೀ ಟಿ.ಎಂ. ಮೈಲಾರಪ್ಪ ಅವರು ವಂದಿಸಿದರು. ಅ

***ಡಾ. ವೈ. ಅವನೀಂದ್ರನಾಥ್ ರಾವ್***





# ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘದ 2013–14ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಮಾರ್ಚ್ 16, 22, 23, 29 ಮತ್ತು 30ರಂದು ದೆಹಲಿ ಕರ್ನಾಟಕ ಸಂಘ ಮತ್ತು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನ ಮೈದಾನದಲ್ಲಿ ನಡೆಯಿತು.

ಮಾರ್ಚ್ 22 ಮತ್ತು 23ರಂದು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಹಳೇ ಕ್ಯಾಂಪಸ್‌ನ ಮೈದಾನದಲ್ಲಿ ನಡೆದ ವಿವಿಧ ಆಟೋಟ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿಯ ಸಂಚಾಲಕ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕ್ರೀಡಾ ಸಮಿತಿಯ ಸದಸ್ಯ ಶ್ರೀ ಶಿವರಾಮ ರೈ, ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಆಶಾ ಶ್ಯಾಮಸುಂದರ್, ಶ್ರೀ ಶ್ಯಾಮಸುಂದರ್, ಶ್ರೀ ತ್ಯಾಗೇಶ್ ಮೂರ್ತಿ ಅವರು ಶಿಸ್ತುಬದ್ಧವಾಗಿ ನಡೆಸಿಕೊಟ್ಟರು.

ಮಾರ್ಚ್ 29ರಂದು ನಡೆದ ರಂಗೋಲಿ ಸ್ಪರ್ಧೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ, ಸ್ಮರಣಶಕ್ತಿ ಪರೀಕ್ಷೆಯನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಲತಾ, ಚಿತ್ರಕಲೆ ಸ್ಪರ್ಧೆಯನ್ನು ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಕುಸುಮಾ ನಂದರಗಿ ಅವರು ನಡೆಸಿಕೊಟ್ಟರು. ಶ್ರೀ ಚೆನ್ನು ಎಸ್.ಮಠದ ಮತ್ತು ಶ್ರೀ ಸುಧೀರ್ ಫಡ್ನೀಸ್, ಶ್ರೀಮತಿ ಜ್ಯೋತಿ ಪೊದ್ದಾರ್, ಶ್ರೀಮತಿ ಶಾಲನ್ ಮುರಗೋಡ ಅವರು ನಿರ್ಣಾಯಕರಾಗಿದ್ದರು. ಅ









# ಸ್ಪರ್ಧಾ ವಿಜೇತರು

**ಕ್ಯಾರಂ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ತ್ಯಾಗೇಶ್ ಮೂರ್ತಿ 2. ನಾಗರಾಜ ಎಚ್. 3. ಭಾಸ್ಕರ್ ಎಸ್.

**ಕ್ಯಾರಂ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ಗಿರಿಜಾ ಶ್ರೀನಿವಾಸ 2. ಏಕ್ತಾ ಮೂರ್ತಿ 3. ದೀಕ್ಷಾ ನಾಯಕ್

**ಕ್ಯಾರಂ ಡಬಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟವರು ಪು/ಮ) : ತ್ಯಾಗೇಶ್ ಮೂರ್ತಿ ಮತ್ತು ಶೋಭಾ ಗೌಡ 2. ನಾಗರಾಜ ಎಚ್. ಮತ್ತು ಏಕ್ತಾ ಮೂರ್ತಿ 3. ದಿವಾಕರ್ ಮತ್ತು ಜ್ಯೋತಿ

**ಚೆಸ್ :** (10ವರ್ಷಕ್ಕಿಂತ ಮೇಲ್ಪಟ್ಟವರು) 1. ಶಿವರಾಜು 2. ಪಿ. ದಿನೇಶ್ 3. ವೃಷಭ್

**ಕಬಡ್ಡಿ :** 1. ಬೆಳ್ಳಿಯಪ್ಪಾಸ್ ಗ್ರೂಪ್ 2. ಡಿ.ವಿ.ಜಿ.ಎಸ್. **ಉತ್ತಮ ರೈಡರ್ :** ರತ್ನಾಕರ್ ರೈ, **ಉತ್ತಮ ಕ್ಯಾಚರ್** : ಮಲ್ಲಪ್ಪ

**ವಾಲಿಬಾಲ್ :** 1. ಡಿ.ವಿ.ಜಿ.ಎಸ್. 2. ಬೆಳ್ಳಿಯಪ್ಪಾಸ್ ಗ್ರೂಪ್

**ಥ್ರೋಬಾಲ್ :** (ಮಹಿಳೆಯರು) 1. ಡಿ.ಪಿ.ಕೆ. ಡಬ್ಲ್ಯು.ಎ. 2. ಡಿ.ವಿ.ಜಿ.ಎಸ್.

**50 ಮೀ. ಓಟ :** (3–5 ವರ್ಷ) 1. ಎಂ. ಮನೀಶ್‌ಧರ್ಮಾ 2. ಸಾಮ್ರಾಟ್ ಅವಾಟೆ 3. ಧನ್‌ವಿನ್ ಎಚ್

**50ಮೀ. ಓಟ :** (3–5ವರ್ಷ) 1.ಎನ್. ಕೀರ್ತನಾ 2. ಸಾನ್ವಿ ಕುಮಾರ್ 3. ಭಕ್ತಿ

**50ಮೀ. ಓಟ :** (6–8ವರ್ಷ) 1. ರೋಹನ್ ರಂಗನಾಥ್ 2. ಶ್ರೀಜನ್ 3. ಲಕ್ಷ್ಯ ಎನ್.

**50ಮೀ. ಓಟ :** (6–8ವರ್ಷ) 1. ಚೈತನ್ಯ 2. ಎನ್. ಮಾನ್ಸಿ 3. ವಿಸ್ಮಯಕುಮಾರ್

**100ಮೀ. ಓಟ :** (9–11ವರ್ಷ) 1. ಧನುಶ್ ಗೌಡ 2. ಜಿತೇಶ್ ಕುಮಾರ್ 3. ಶ್ರೀಧನ್ ಮೂರ್ತಿ

**100ಮೀ. ಓಟ :** (9–11ವರ್ಷ) 1. ಕೆ.ಆರ್. ಅನನ್ಯ 2. ಅನನ್ಯ ಎನ್ 3. ಪ್ರೇರಣಾ ರಾವ್

**100ಮೀ. ಓಟ :** (12–15ವರ್ಷ) 1. ಚಿರಾಗ್ ನಾಯ್ಕ್ 2.ಅನ್‌ಮೋಲ್ ಎಚ್.ಆರ್. 3. ಮೋಹನ್ ಕುಮಾರ್

**100ಮೀ. ಓಟ :** (12–15ವರ್ಷ) 1. ದೀಪ್ತಿ ನಾಯ್ಕ್ 2. ಐಶ್ವರ್ಯ 3. ಅಮಿತಾ ದೇವ್

**ಶಾಟ್‌ಪುಟ್ :** (40–49ವರ್ಷ, ಪುರುಷರು) 1. ವೈ.ಎಂ. ಹೆಗ್ಡೆ 2. ದೇವೇಂದ್ರಪ್ಪ 3. ಎಸ್.ಡಿ. ಶ್ರೀನಿವಾಸ

**ಶಾಟ್‌ಪುಟ್ :** (50ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಚಂದ್ರಪ್ಪ 2. ಶೇಖರ್ ಎಂ.ಆರ್. 3. ಶಿವರಾಮ ರೈ ಮತ್ತು ಪಿ.ಎಂ. ಗಣೇಶ್

**100 ಮೀ. ಓಟ :** (41ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ವೈ.ಎಂ. ಹೆಗ್ಡೆ 2. ಎಚ್.ಜಿ. ನಾಗರಾಜಯ್ಯ 3. ಎಸ್.ಡಿ. ಶ್ರೀನಿವಾಸ

**ಸೂಜಿ ದಾರ :** (20–40ವರ್ಷ, ದಂಪತಿಗಳು) 1. ಪ್ರಕಾಶ್ ಶೆಟ್ಟಿ ಉಳೆಪಾಡಿ 2. ಮಹದೇವ್ 3. ಮಂಜುನಾಥ ಎಚ್.ಕೆ.

**ಸೂಜಿ ದಾರ :** (41ವರ್ಷಕ್ಕಿಂತ ಮೇಲ್ಪಟ್ಟ ದಂಪತಿಗಳು) : 1. ಚಂದ್ರಪ್ಪ 2. ಎಚ್.ಜಿ. ನಾಗರಾಜಯ್ಯ 3. ರಾಜಕುಮಾರ್

**ವೇಗ ನಡಿಗೆ :** (45–49ವರ್ಷ, ಪುರುಷರು) 1. ದೇವೇಂದ್ರ 2. ಶಿವರಾಮ್ ಎಚ್.ಜಿ. 3.ಚಂದ್ರ ನಾಯ್ಕ್ ಮತ್ತು ರಮೇಶ್ ಎಚ್.ಎನ್.

**ವೇಗ ನಡಿಗೆ :** (50 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಬಿ. ಚಂದ್ರಪ್ಪ 2. ಸಿ.ವಿ. ಅನ್ನಿಗೆರಿ 3. ರಾಧಾಕೃಷ್ಣ

**ವೇಗ ನಡಿಗೆ :** (40–49ವರ್ಷದ ಮಹಿಳೆಯರು) 1. ವಿಮಲಾ ಗೌಡ 2. ಸಿ.ಕೆ. ಜಯ 3. ಮಂಜುಳಾ ನಾಗರಾಜ

**ಟೇಬಲ್ ಟೆನ್ನಿಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಶೇಖರ್ ಎಂ.ಆರ್ 2. ಅಭಯ್

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಪಿ. ದಿನೇಶ್ 2. ಅಭಯ್ 3. ಶಾಂತಕುಮಾರ್ ಎಸ್.ಜೆ.

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಏಕ್ತಾ ಮೂರ್ತಿ 2. ವಿ. ಪದ್ಮ 3. ದಿನೇಶ್ ನಾಯ್ಕ್

**200 ಮೀ. ಓಟ :** (15–20ವರ್ಷ ಪುರುಷರು) 1. ಮನೀಶ್ ಪೂಜಾರಿ 2. ಕಲ್ಮೇಶ್ವರ್ 3. ಸಿ. ಪುನೀತ್

**200ಮೀ. ಓಟ :** (15–20ವರ್ಷ ಮಹಿಳೆಯರು) 1. ಉಷಾ ಸಿ. 2. ದೀಪ್ತಿ ನಾಯ್ಕ್ 3. ಏಕ್ತಾ ಮೂರ್ತಿ

**ಶಾಟ್‌ಪುಟ್ :** (21–39ವರ್ಷ, ಪುರುಷರು) 1.ದಿಶಾಂತ್ ಶೆಟ್ಟಿ 2.ರಘು 3.ಪ್ರೇಮನಾಥ್ ಶೆಟ್ಟಿ

**ಶಾಟ್‌ಪುಟ್ :** (21–35ವರ್ಷ, ಮಹಿಳೆಯರು) 1. ವಂದನಾ ಶೆಟ್ಟಿ 2. ಪದ್ಮ 3. ವಿಮಲಾ ನಾಯ್ಕ್

**ಶಾಟ್‌ಪುಟ್ :** (36ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮೀ ರಾಜ್‌ಕುಮಾರ್ 2. ಸವಿತಾ ಇನಾಮದಾರ್ 3. ಮೀನಾ ವಸಂತ್









**ಮ್ಯೂಸಿಕಲ್ ಚೇರ್ :** (5–8ವರ್ಷ)
1. ಲಕ್ಷ್ಯ ಎನ್. 2. ಶ್ರೀಜನ್ 3.ವಿಸ್ಮಯ್ ಕುಮಾರ್
**ಮ್ಯೂಸಿಕಲ್ ಚೇರ್ :** (9–12ವರ್ಷ) 1. ಅನನ್ಯ ಎನ್. 2. ಸುರೇಶ್ 3. ಕಾವ್ಯ
**ಮ್ಯೂಸಿಕಲ್ ಚೇರ್ :** (20–39ವರ್ಷ) 1. ಮೀನಾ ವಸಂತ್ 2. ಆರತಿ ಎಸ್.ಡಿ. 3. ಪದ್ಮ ವಿ
**ಮ್ಯೂಸಿಕಲ್ ಚೇರ್ :** (40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ವಿಮಲಾ ಗೌಡ ಕೆ.ವಿ.
2. ಜಮುನಾ ಸಿ. ಮಠದ
3. ಸುಜಾತ ಆರ್. ಪೂಜಾರಿ
**200 ಮೀ. ಓಟ :** (21–34ವರ್ಷದ ಪುರುಷರು)
1. ನಾಗರಾಜ ಎಚ್ 2. ಸನ್ಮಾನ್ ಗೌಡ
3. ಸಂತೋಷ್
**200ಮೀ. ಓಟ :** (35ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಎ.ಡಿ. ಮುರುಗಾಲಿ 2. ಸುರೇಂದ್ರ ಎಂ. 3. ವಿಶ್ವನಾಥ್
**100 ಮೀ. ಓಟ :** (21–34ವರ್ಷದ ಮಹಿಳೆಯರು)
1. ಆರತಿ ಎಸ್.ಡಿ. 2. ಸುಷ್ಮಾ 3. ಪದ್ಮ ವಿ.
**100ಮೀ. ಓಟ :** (35ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಜಯಲಕ್ಷ್ಮೀ ರಾಜ್‌ಕುಮಾರ್
2. ಅನಿತಾ ನಾಯ್ಕ್ 3. ಗಿರಿಜಾ ಶ್ರೀನಿವಾಸ
**ಬಾಲ್ ಇನ್ ಬಕೆಟ್ :** (20ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ಹನುಮೇ ಗೌಡ 2. ಶಂಕ್ರೇ ಗೌಡ
3. ಮಹದೇವ್
**ಬಾಲ್ ಇನ್ ಬಕೆಟ್ :** (20ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಪ್ರೇಮಾ ಗೌಡ 2. ಮಮತಾ ಶಿವರಾಮ್ 3. ರಶ್ಮಿ
**ಲಿಂಬೆ ಮತ್ತು ಚಮಚ :** (30ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಗಿರಿಜಾ ಶ್ರೀನಿವಾಸ 2. ಶೋಭಾ ಗೌಡ 3. ವಿಮಲಾ ನಾಯ್ಕ್
**ಲಗೋರಿ :** 1. ಡಿ.ಪಿ.ಕೆ.ಡಬ್ಲ್ಯು.ಎ. (ಎ)
2. ಕರಾವಳಿ
**ರಂಗೋಲಿ :** (15ವರ್ಷಕ್ಕಿಂತ ಮೇಲ್ಪಟ್ಟವರು)
1. ಮೈಥಿಲಿ ಅತ್ತಾವರ್ 2. ವಿಮಲಾ ರಂಗನಾಥ್
3. ಶೈಲಾ ಕುಮಾರ್ ಸಮಾಧಾನಕರ ಬಹುಮಾನ : ಪ್ರೇಮಾ ಗೌಡ
**ಸ್ಮರಣ ಶಕ್ತಿ ಪರೀಕ್ಷೆ** (ಮೆಮೊರಿ ಟೆಸ್ಟ್) : (7–10ವರ್ಷ) 1. ಓಶೋ ಮುರಗೋಡ
2. ಸುಹಿತ್ ವಸಂತ್ 3. ಚೈತನ್ಯ
**ಸ್ಮರಣ ಶಕ್ತಿ ಪರೀಕ್ಷೆ** (ಮೆಮೊರಿ ಟೆಸ್ಟ್) : (10–14ವರ್ಷ) 1. ಅಮರನಾಥ್ 2. ರಚನಾ ಜೆ.
3. ಪರಿಭಾ
**ಚಿತ್ರ ಬರೆಯುವ ಸ್ಪರ್ಧೆ :** (3–5ವರ್ಷ)
1. ಭಕ್ತಿ ಸಂಜೀವ 2. ಸಮರ್ಥ 3. ಅಪೇಕ್ಷ
**ಚಿತ್ರ ಬರೆಯುವ ಸ್ಪರ್ಧೆ :** (6–9ವರ್ಷ)
1. ಪ್ರಿಯಾಂಕ 2. ಚಂದನಾ ಗೌಡ
3. ಕೆ.ಎನ್. ಭಾಗ್ಯಶ್ರೀ
**ಫ್ಯಾನ್ಸಿ ಡ್ರೆಸ್ :** (3–5ವರ್ಷ)
1. ಅಪೇಕ್ಷ 2. ಭಕ್ತಿ 3. ಸಮರ್ಥ
**ಫ್ಯಾನ್ಸಿ ಡ್ರೆಸ್ :** (6–9ವರ್ಷ)
1. ಚಂದನ ಗೌಡ 2. ಮಾನ್ಸಿ 3. ಜೆ. ರಿಷಿ
**ಕನ್ನಡ ರೈಮ್ಸ್ :** (3–5ವರ್ಷ)
1. ಪುವಿತ್ ಚರಮನ್ನಾ 2. ಕೀರ್ತನ
3. ಎಂ. ಮನೀಶ್‌ಧರ್ಮಾ
**ಕ್ವಿಜ್ :** (15ವರ್ಷಕ್ಕಿಂತ ಮೇಲ್ಪಟ್ಟವರು)
**1. ಯಮುನಾ ತಂಡ** : ಎ.ಟಿ. ಶ್ರೀನಿವಾಸ, ಹನುಮೇ ಗೌಡ, ಕೆ.ಆರ್. ನಂದಿನಿ, ಜಯಶ್ರೀ ಬಸವರಾಜು, ಮಂಜುಳಾ ನಾಗರಾಜ, ದೇವೇಂದ್ರ, ಮೋಹನ್ ಮಾಡ, ಶಕುಂತಲಾ ನಾಯಕ್
**2. ಗೋದಾವರಿ ತಂಡ :** ಶೋಭಾ ಗೌಡ, ಅಬಿಷೇಕ್ ರೈ, ಪ್ರದೀಪ್ ಕುಮಾರ್, ಭವ್ಯಶ್ರೀ, ಡಾ. ಅಹಲ್ಯಾಚಿಂತಾಮಣಿ, ಮೀನಾ ವಸಂತ್, ಎಚ್.ನಾಗರಾಜ
**3. ಕಾವೇರಿ ತಂಡ :** ಆಶಾದೇವ್, ಎಚ್.ಜಿ. ಶಿವರಾಮ್, ಎಚ್.ಎಸ್. ತೇಲಿ, ಸಿ.ವಿ. ಅನ್ನಿಗೆರಿ, ಎಸ್.ಸಿ. ಹೇಮಲತಾ, ವಿಮಲಾ ಗೌಡ, ಮೋಹನ್ ಕುಮಾರ್, ಜ್ಯೋತಿ ಶಂಭು
**ಪಿಕ್ ಅಂಡ್ ಸ್ಪೀಕ್ :** (18ವರ್ಷಕ್ಕಿಂತ ಮೇಲ್ಪಟ್ಟವರು)
1. ಡಾ. ಅಹಲ್ಯಾ ಚಿಂತಾಮಣಿ 2. ಡಾ. ವಿ.ಆರ್. ಗುಡ್ಡೇ ಗೌಡ 3. ಪ್ರದೀಪ್ ಕುಮಾರ್
**ಕನ್ನಡ ಸ್ಪೀಚ್ :** (18ವರ್ಷಕ್ಕಿಂತ ಮೇಲ್ಪಟ್ಟವರು)
1. ಪೂಜಾ ಪ್ರದೀಪ್ 2. ಪ್ರಕಾಶ್ ಶೆಟ್ಟಿ ಉಳೆಪಾಡಿ
3. ನಂದಿನಿ ಕೆ.ಆರ್.
**ಭಕ್ತಿ ಗೀತೆ :** (10–17ವರ್ಷ) 1. ಪ್ರೇರಣಾ ರಾವ್
2. ಜಾಹ್ನವಿ ಜಿ 3. ರಚನಾ ಜೆ.
**ಭಾವಗೀತೆ :** ((10–17ವರ್ಷ) 1. ಪ್ರೇರಣಾ ರಾವ್
2. ಜಾಹ್ನವಿ ಜಿ. 3. ಸಂಧ್ಯಾ ಜಿ.
**ಭಕ್ತಿ ಗೀತೆ :** (18ವರ್ಷಕ್ಕಿಂತ ಮೇಲ್ಪಟ್ಟವರು)
1. ಎಸ್. ಕುಮಾರ್ 2. ಬಿ.ವಿ. ಮಮತಾ
3. ಎಚ್.ಸಿ. ಹೇಮಲತಾ
**ಭಾವಗೀತೆ :** (18 ವರ್ಷಕ್ಕಿಂತ ಮೇಲ್ಪಟ್ಟವರು)
1. ಎಸ್.ಕುಮಾರ್ 2. ನೇತ್ರಾವತಿ
3. ಜಮುನಾ ಸಿ. ಮಠದ ಅ









ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಂದರ್ಭದಲ್ಲಿ ನಡೆದ ವಿವಿಧ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮಾರ್ಚ್ 30ರಂದು ಬಹುಮಾನ ವಿತರಣೆ ಮಾಡಲಾಯಿತು.
ಇದರ ಫೋಟೊಗಳನ್ನು ಸಂಘದ ವೆಬ್‌ಸೈಟ್ **www.delhikarnatakasangha.com** ನಲ್ಲಿ ನೋಡಬಹುದು.



# ಹೊರನಾಡ ಕನ್ನಡಿಗರ ಘನತೆ ಹೆಚ್ಚಿಸಿದ ಯಶವಂತ ಚಿತ್ತಾಲರು ಇನ್ನು ನೆನಪು ಮಾತ್ರ

ದೆಹಲಿ ಕರ್ನಾಟಕ ಸಂಘದ ಮೊತ್ತ ಮೊದಲ ಡಾ.ಶಿವರಾಮ ಕಾರಂತ ಪ್ರಶಸ್ತಿ ಪಡೆದ ಶ್ರೀ ಯಶವಂತ ಚಿತ್ತಾಲರು ಮಾರ್ಚ್ 22 ರಂದು ಮುಂಬೈಯಲ್ಲಿ ನಿಧನರಾದರು. ಉತ್ತರ ಕನ್ನಡದ ಹನೆಹಳ್ಳಿಯಲ್ಲಿ 1928ರಲ್ಲಿ ಜನಿಸಿದ ಅವರು, ಎಲ್ಲ ಬಗೆಯ ಸಾಹಿತ್ಯಿಕ ರಾಜಕೀಯಗಳಿಂದ ದೂರವಿದ್ದರು. ಅವರ ಸಾವು, ಹೊರನಾಡ ಕನ್ನಡಿಗರ ಬದುಕಿನ ಶಕ್ತಿ ಮತ್ತು ಮಿತಿಗಳಿಗೆ ಒಂದು ವ್ಯಾಖ್ಯಾನ.

ಅರುವತ್ತರ ದಶಕದಿಂದ ಇಂದಿನವರೆಗೆ ಅವರು ಬರೆದ ಕತೆಗಳು, ಕಾದಂಬರಿಗಳು, ಸೃಜನಶೀಲತೆಯ ಕುರಿತು ಅವರು ಆಗಾಗ ಪ್ರಕಟಿಸಿದ ವಿಚಾರಗಳನ್ನು ನಾವು ಕನ್ನಡದ ಓದುಗರು. ಸಾಹಿತ್ಯದ ವಿದ್ಯಾರ್ಥಿಗಳನ್ನು ಆಳವಾಗಿ ಪ್ರಭಾವಿಸಿದೆ. ಅವರು ಬರೆದ ಕತೆಯಾದಳು ಹುಡುಗಿ, ಆಟ, ಬೇನ್ಯಾ ಕತೆಗಳು ಜಗತ್ತಿನ ಯಾವುದೇ ಭಾಷೆಯ ಕತೆಗಳಿಗೆ ಕಡಿಮೆ ಇಲ್ಲದ ರಚನೆಗಳಾಗಿವೆ. 'ಶಿಕಾರಿ' ಮತ್ತು ಪುರುಷೋತ್ತಮ ಕಾದಂಬರಿಗಳು ಸ್ವಾತಂತ್ರ್ಯೋತ್ತರ ಭಾರತಕ್ಕೆ ಬರೆದ ಸಾಹಿತ್ಯಿಕ ವ್ಯಾಖ್ಯಾನ. ನನ್ನ ಮಟ್ಟಿಗೆ ಯಾವ ಸಮಾಜಶಾಸ್ತ್ರಜ್ಞನು ಕನ್ನಡದ ಸಮಾಜವನ್ನು ಹೀಗೆ ವಿವರಿಸಿಲ್ಲ. ಇಂಥ ಮಹತ್ವದ ಲೇಖಕರು ಕನ್ನಡ ನಾಡಿನ ವರ್ತಮಾನದ ಸಾಹಿತ್ಯಿಕ ರಾಜಕೀಯದಿಂದ ದೂರ ಉಳಿದಿದ್ದರಿಂದ ಅವರಿಗೆ ಕೊನೆಗೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟವೂ ದೊರೆಯಲಿಲ್ಲ.

ಇಷ್ಟಿದ್ದರೂ ಚಿತ್ತಾಲರಿಗೆ ಮುಖ್ಯವಾದ ಕೆಲವಾದರೂ ಪ್ರಶಸ್ತಿಗಳು ಸಂದಿರುವುದು ಸಂತೋಷದ ವಿಷಯ. ಅವರ ಕತೆಯಾದಳು ಹುಡುಗಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಅವರ ಶಿಕಾರಿ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಪುರುಷೋತ್ತಮ ಕಾದಂಬರಿಯು ಭಾರತೀಯ ಭಾಷಾ ಪ್ರಶಸ್ತಿ ಪಡೆದುಕೊಂಡಿತು. ಇದೇ ರೀತಿ ವರ್ಧಮಾನ ಪ್ರಶಸ್ತಿ, ಮಹಾರಾಷ್ಟ್ರ ಗೌರವ, ಮಾಸ್ತಿ ಪ್ರಶಸ್ತಿ ಮತ್ತು ಶಿವರಾಮ ಕಾರಂತ ಪ್ರಶಸ್ತಿಗಳು ಅವರಿಗೆ ಲಭಿಸಿವೆ. ಇವೆಲ್ಲಕ್ಕೆ ಕಿರೀಟ ಪ್ರಾಯವಾಗಿ ಚಿತ್ತಾಲರಿಗೆ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಯೂ ದೊರೆತಿದೆ.

ಚಿತ್ತಾಲರಿಗೆ 50 ದಾಟಿತ್ತು, 60 ದಾಟಿತ್ತು, 75 ಕೂಡಾ ದಾಟಿ 80 ತುಂಬಿತ್ತು ಅವರಿಗೊಂದು ಒಳ್ಳೆಯ ಅಭಿನಂದನ ಗ್ರಂಥ ತರಲು ಹೊರನಾಡ ಕನ್ನಡಿಗರಿಗೆ ಸಾಧ್ಯವಾಗಲಿಲ್ಲ. ಒಳನಾಡಿನ ಕನ್ನಡಿಗರು ನಿರೀಕ್ಷಿಸಿದಷ್ಟು ಆದರ ತೋರಿಸಿಲ್ಲ. ಹೊರನಾಡಿನಲ್ಲೋ ಒಳನಾಡಿನಲ್ಲೋ ಈಗ ಬರುತ್ತಿರುವ ಅಭಿನಂದನಾ ಗ್ರಂಥಗಳನ್ನೋ, ಆಗುತ್ತಿರುವ ಸನ್ಮಾನಗಳನ್ನೋ ಗಮನಿಸುವಾಗ ಈ ನೋವು ಇನ್ನಷ್ಟು ಹೆಚ್ಚುತ್ತಿದೆ.

'ನನ್ನ ಕಾದಂಬರಿಯ ನಾಯಕ– ಪುರುಷೋತ್ತಮನೇ 'ಎಂದು ಛೇಡಿಸುತ್ತಾ ರವಿವಾರ ಬೆಳಗ್ಗೆ ಆಗಾಗ ಫೋನ್ ಮಾಡುತ್ತಿದ್ದ ಚಿತ್ತಾಲರಿಂದ ಇನ್ನು ಮುಂದೆ ದೂರವಾಣಿ ಕರೆಯಿಲ್ಲ. ಅ

*ಡಾ. ಪುರುಷೋತ್ತಮ ಬಿಳಿಮಲೆ*

ಗುರ್‌ಗಾಂವ್‌ನ ಕನ್ನಡ ಯುವಕರ

# ಬಣ್ಣದ ಹಬ್ಬ 'ಶಿಕ್ಷಾರ್ಥ' ಮಕ್ಕಳೊಂದಿಗೆ



ಗುರ್‌ಗಾಂವ್‌ನ ಕನ್ನಡ ಯುವಕರು ಬಣ್ಣದ ಹಬ್ಬ ಹೋಳಿಯನ್ನು ವಿನೂತನ ರೀತಿಯಲ್ಲಿ ಆಚರಿಸಿದರು. ಬಣ್ಣದ ಹಬ್ಬವನ್ನು ಬಡ ಮಕ್ಕಳೊಂದಿಗೆ ಆಚರಿಸುವ ನಿಟ್ಟಿನಲ್ಲಿ ಮಾರ್ಚ್ 15ರಂದು ಸ್ವಯಂ ಸೇವಾಸಂಸ್ಥೆ ಮೂಲಕ ನಡೆಯುತ್ತಿರುವ 'ಶಿಕ್ಷಾರ್ಥ' ಎಂಬ ಶಾಲೆಯ ಮಕ್ಕಳಿಗೆ ಶಿಕ್ಷಣದ ಮಹತ್ವ ಮತ್ತು ಆರೋಗ್ಯದ ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿ, ನೈಸರ್ಗಿಕ ಬಣ್ಣಗಳನ್ನು ಬಳಸಿ ಹೋಳಿ ಹಬ್ಬವನ್ನು ಆಚರಿಸಿದರು. ಜತೆಗೆ ಚಾಕೋಲೇಟ್ ಮತ್ತು ಸಿಹಿ ತಿನಿಸುಗಳನ್ನು ಹಂಚಿದರು. ಶಾಲಾ ವಿದ್ಯಾರ್ಥಿಗಳಿಗೆ ಬೇಕಾದ ಶೈಕ್ಷಣಿಕ ಸಾಮಗ್ರಿಗಳಾದ ನೋಟ್‌ಬುಕ್ಸ್, ಪೆನ್, ಪೆನ್ಸಿಲ್, ಇತರೆ ವಸ್ತುಗಳನ್ನು ಹಂಚಿದರು. ಸಾಮಾಜಿಕ ಬದಲಾವಣೆ ಬಯಸುವ ಮಿತ್ರರಾದ ಈಶ್ವರಲಿಂಗ ಅರೇರಾ, ಗಜಾನನ ಶರ್ಮ, ಸಾಯಿಪ್ರಸಾದ್ ಹೇರಾಂಜಲ್, ಪ್ರಭಾಕರ್ ಮಡ್ಡಿತೋಟ್, ರಾಜು ತೋಟ, ಬಿಪಿನ್ ಕುಮಾರ್, ಕೈಲಾಶ್ ಸೋನಿ ಮತ್ತು ಸತೀಶ್ ಬಸವಾರಾಧ್ಯ ಮೊದಲಾದವರು ಬಣ್ಣದ ಹಬ್ಬವನ್ನು ಸಾರ್ಥಕ ರೂಪದಲ್ಲಿ ಆಚರಿಸಿದರು. ಅ

*ಸತೀಶ ಬಸವಾರಾಧ್ಯ*

## ಅಭಿನಂದನೆ



ಸುಪ್ರಿಂ ಕೋರ್ಟ್‌ನ ಹಿರಿಯ ವಕೀಲರಾಗಿರುವ ಶ್ರೀ ಶರತ್ ಎಸ್. ಜವಳಿ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಗೌರವ ಡಾಕ್ಟರೇಟ್ ಪದವಿ ನೀಡಿದೆ. 1939ರಲ್ಲಿ ಜನಿಸಿದ ಶ್ರೀ ಜವಳಿ ಅವರು 1959ರಲ್ಲಿ ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಬಿ.ಎ. ಪದವಿ ಮತ್ತು 1961ರಲ್ಲಿ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದರು.
ಜವಳಿಯವರು ಧಾರವಾಡದ ಕೆಇ ಬೋರ್ಡ್ ಶಾಲೆ ಮತ್ತು ರಾಜಸ್ಥಾನದ ಆಜ್ಮೀರ್‌ನ ಮೆಯೋ ಶಾಲೆಯಲ್ಲಿ ಆಡಳಿತಾಧಿಕಾರಿಯಾಗಿದ್ದ ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತರಾಗಿದ್ದಾರೆ ಅ

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ
# ಮಹಿಳಾ ದಿನಾಚರಣೆ



ಮಹಿಳಾ ದಿನಾಚರಣೆಯನ್ನು ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ಮಾರ್ಚ್ 19ರಂದು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮ್ಯಾರಾಥಾನ್ ಓಟಗಾರ್ತಿ ಮಾಲಾ ಹೊನ್ನತ್ತಿ ಮತ್ತು ಕಲಾರಂಗದಲ್ಲಿ ಹೆಸರು ಮಾಡಿರುವ ಶಾಲನ್ ಮುರಗೋಡ ಅವರನ್ನು ಗೌರವಿಸಲಾಯಿತು.

ಮಾಲಾ ಹೊನ್ನತ್ತಿ ಅವರು ಮಾತನಾಡುತ್ತಾ "ಇವತ್ತಿನ ದಿನ ನನಗೆ ನನ್ನ ಮನೆಯವರೊಳಗೆ ಮನೆಯ ಕಾರ್ಯಕ್ರಮಕ್ಕೆ ಬಂದಹಾಗೆ ಅನಿಸುತ್ತಿದೆ. ದೆಹಲಿಗೆ ಬಂದ ನಂತರ ಸಂಘವೇ ನನಗೆ ಮನೆಯಂತಾಗಿತ್ತು. ಅಲ್ಲಿ ಪರಿಚಯವಾದವರೆಲ್ಲರ ಒಡನಾಟ ನನಗೆ ಮನೆಯ ವಾತಾವರಣದಂತೆಯೇ ಎನಿಸುತ್ತಿತ್ತು ಹಾಗಾಗಿ ಹೆಚ್ಚು ಸಂಘದಲ್ಲಿಯೇ ಕಾಲ ಕಳೆಯುತ್ತಿದ್ದೆ. ದೆಹಲಿಗೆ ಬರಲು ಕಾರಣ ನನ್ನಿಷ್ಟದಂತೆ ಬದುಕಬೇಕು ಎಂಬುದು. ಚಿಕ್ಕದಾಗಿದ್ದ ಮ್ಯಾರಾಥಾನ್‌ನ ಓಟ ದೆಹಲಿಗೆ ಬಂದ ನಂತರ ರಾಷ್ಟ್ರಮಟ್ಟದಲ್ಲಿ, ಅಂತರರಾಷ್ಟ್ರ ಮಟ್ಟದಲ್ಲಿ ಬೆಳೆಯುತ್ತಾ ಹಲವಾರು ಪದಕಗಳನ್ನು, ಹೆಸರನ್ನು ಗಳಿಸಿಕೊಟ್ಟಿತು. ಜೊತೆ ಜೊತೆಗೆ ಪರ್ವತಾರೋಹಣದ ಬಗ್ಗೆಯೂ ಆಸಕ್ತಿ ಮೂಡಿ ಅದರಲ್ಲಿಯೂ ಭಾಗಿಯಾಗುತ್ತಾ ಬಂದೆ. ಹಿಮಾಲಯದ ಆ ಪ್ರಶಾಂತ ವಾತಾವರಣದಲ್ಲಿ ಸಿಗುವ ಚೈತನ್ಯ ಶಕ್ತಿ ಮನಸ್ಸಿಗೆ ಮುದ ನೀಡುತ್ತದಲ್ಲದೆ ನನಗೆ ಜೀವನದಲ್ಲಿ ನವೋಲ್ಲಾಸವನ್ನು, ಹುರುಪನ್ನು ತುಂಬುತ್ತದೆ. ಹಾಗೆಯೇ ದಿನವೂ ಓದುವುದು ನನ್ನ ಮನಸ್ಸಿಗೆ ಸಮಾಧಾನ, ಇಲ್ಲದಿದ್ದರೆ ಏನೋ ಕಳೆದುಕೊಂಡ ಭಾವ ಹಾಗಾಗಿ ನಿತ್ಯದ ಓಟ, ವರ್ಷಕ್ಕೊಮ್ಮೆ ಹಿಮಾಲಯದ ಒಡನಾಟ ನನ್ನ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇಲ್ಲಿವರೆಗೆ ಸಾಧನೆ ಮಾಡಿದ್ದು, ಸಾಧಿಸಿದ್ದು ನನ್ನ ಮನಃಶಾಂತಿಗಾಗಿ. ಆದರೆ ದೇಶಕ್ಕಾಗಿ ಏನು ಮಾಡಿದ್ದೇನೆ ಎನ್ನುವ ಯೋಚನೆ ಬರುತ್ತದೆ. ಹಾಗಾಗಿ ಅಂಗವಿಕಲ ಸಂಸ್ಥೆಗಳಲ್ಲಿ ಕೆಲಸ ಮಾಡಬೇಕು ಎಂದು ನಿರ್ಧರಿಸಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಮನುಷ್ಯನ ವಯಸ್ಸು ಬರೀ ಸಂಖ್ಯೆ, ದೇಹ, ಮನಸ್ಸು, ಹುಮ್ಮಸ್ಸಿನಿಂದ ಇರುವಾಗ ವಯಸ್ಸಿಗೇನು ಇಲ್ಲ" ಎಂದು ತಿಳಿಸಿದರು.

ಶಾಲನ್ ಮುರಗೋಡ ಅವರು ತಮ್ಮ ಕಲಾಕ್ಷೇತ್ರದ ಸಾಧನೆಗೆ ಕಾರಣ ನನ್ನ ಪತಿಯವರು. ಬೇಗ ಮದುವೆಯಾದ ಕಾರಣ ನಾನು ಕಾಲೇಜಿಗೆ ಹೋಗಬೇಕು ಎನ್ನುವ ಹಂಬಲ ಹಾಗೆಯೇ ಉಳಿಯಿತು. ಅದನ್ನು ಮನೆಯಲ್ಲಿ ತಿಳಿಸಿದಾಗ ಮಕ್ಕಳಿದ್ದಾರೆ, ಮನೆ ಜವಾಬ್ದಾರಿ ಬೇರೆ ಹೇಗೆ ಕಾಲೇಜಿಗೆ ಹೋಗ್ತಿಯ, ಕಷ್ಟ ಆಗಲ್ಲವ ಅಂತ ಅಂದ್ರು. ನನ್ನ ಅದಮ್ಯ ಆಸೆಯನ್ನು ತಿಳಿದಿದ್ದ ಮನೆಯವರು ಕಾಲೇಜಿಗೆ ಸೇರಲು ಒಪ್ಪಿಗೆ ಇತ್ತರು. ಮನೆಯ ಕೆಲಸ, ಕಾರ್ಯಗಳನ್ನೆಲ್ಲ ನಿಭಾಯಿಸುತ್ತಾ ಕಾಲೇಜು ಮುಗಿಸಿ, ಕಲಾ ಸಾಧನೆಯನ್ನು ಸಾಧಿಸುವುದರ ಬಗ್ಗೆ ತಿಳಿಸಿದರು. ಈ ಇಬ್ಬರು ಸಾಧಕಿಯರನ್ನು ನೋಡುವಾಗ ಒಬ್ಬರು ತಮ್ಮ ಸಾಧನೆಗೆ ಅಡ್ಡಿಯಾಗುವ ಮದುವೆಯೇ ಬೇಡ ಎಂದು ಸಾಧನೆಯನ್ನು ಮಾಡಿದವರು. ಮತ್ತೊಬ್ಬರು ಮದುವೆಯಾದ ಮೇಲೂ ಹೇಗಾದರೂ ಮಾಡಿ ನಾನು ಸಾಧನೆ ಮಾಡಲೇಬೇಕು ಎಂದು ಸಾಧನೆ ಮಾಡಿದವರು.

ಕಲಾಚಾರಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಅಸೋಸಿಯೇಶನ್‌ನ ಅಧ್ಯಕ್ಷೆ ಶ್ರೀಮತಿ ಆಶಾ ಕಾರ್ಯಪ್ಪ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ಮೊಟ್ಟ ಮೊದಲ ಬಾರಿಗೆ ಮಹಿಳಾ ದಿನವನ್ನು ಆಚರಿಸಿದ್ದು ಮೇ 19ರಂದು ನಂತರ ಮಾರ್ಚ್ 8ರಂದು ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಬಂದರು. ಈ ದಿನ ನಾವು ಆಚರಿಸುತ್ತಿರುವುದು ತುಂಬಾ ಸಂತೋಷದ ವಿಚಾರ ಎಂದು ತಿಳಿಸಿದರು. ಹಿರಿಯ ಸದಸ್ಯೆಯಾದ ಶ್ರೀಮತಿ ಸುಮಿತ್ರಾರಾವ್ ಮತ್ತು ಮಾಜಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಲತ ಮೃತ್ಯುಂಜಯ ಅವರು ಮಾಲಾ ಹೊನ್ನತ್ತಿ ಮತ್ತು ಶಾಲನ್ ಮುರಗೋಡ ಅವರಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು.

ಮಹಿಳಾ ದಿನದ ಆಚರಣೆಯ ಮಹತ್ವಕ್ಕೆ ಹೊಂದುವಂತಹ ಸೊಗಸಾದ ಕವಿತೆಗಳನ್ನು ಅಹಲ್ಯಾ ಚಿಂತಾಮಣಿಯವರು ವಾಚಿಸಿದರು. ಜೊತೆಗೆ ಅರ್ಥಪೂರ್ಣವಾದ ವಚನಗಳನ್ನು ಕಲಾಚಾರಿಯವರು ಹಾಡಿದರು. ಅತಿಥಿಗಳಿಗೆ ಅಧ್ಯಕ್ಷೆ ಶ್ರೀಮತಿ ಆಶಾ ಕಾರ್ಯಪ್ಪ ಮತ್ತು ಖಜಾಂಚಿ ರಾಜೇಶ್ವರಿ ಕಲ್ಲೂರು ಅವರು ಕಿರುಕಾಣಿಕೆಗಳನ್ನಿತ್ತು ಗೌರವಿಸಿದರು. ವೀಣಾ ರಮಣ್ ಮತ್ತು ಸುಜಾತ ಜೋಷಿಯವರು ಹೊಸ ಸದಸ್ಯರಾಗಿ ಸೇರ್ಪಡೆಯಾದರು. ರಾಜೇಶ್ವರಿ ಕಲ್ಲೂರು ಅವರು ಅತಿಥಿಗಳ ಸಾಧನೆ ಬಗ್ಗೆ ಮತ್ತು ಒಂದಾಗಿ ಬೆರೆತ ರೀತಿಗೆ ಶ್ಲಾಘಿಸುತ್ತಾ ವಂದನಾರ್ಪಣೆಯನ್ನು ಮಾಡಿದರು. ಶ್ರೀಮತಿ ಉಷಾ ಭರತಾದ್ರಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

***ಎಸ್.ಸಿ. ಹೇಮಲತಾ***

## ಲಿಂಗರಾಜು ಅವರಿಗೆ ಪಿ.ಎಚ್.ಡಿ.



ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯ ಹಾಗೂ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಹಿರಿಯ ತಾಂತ್ರಿಕ ಅಧಿಕಾರಿ ಶ್ರೀ ಜಿ.ಎಂ. ಲಿಂಗರಾಜು ಅವರು ಕುವೆಂಪು ವಿಶ್ವವಿದ್ಯಾಲಯದ 'ಡಾಕ್ಟರ್ ಆಫ್ ಫಿಲಾಸಫಿ' ಪದವಿ ಪಡೆದಿದ್ದಾರೆ.



# ಸುಜಾನ್ ಸಿಂಗ್ ಪಾರ್ಕ್

**ರೇಣುಕಾ ನಿಡಗುಂದಿ ಅವರ 'ದಿಲ್ಲಿ ಡೈರಿಯ ಪುಟಗಳು'ಪುಸ್ತಕದಲ್ಲಿ ಪ್ರಕಟವಾದ ಈ ಬರಹ ಇತ್ತೀಚೆಗೆ ಅಗಲಿದ ಖುಷ್ವಂತ್ ಸಿಂಗ್ ಅವರ ನೆನಪಿನಲ್ಲಿ ಅಭಿಮತ ಓದುಗರಿಗಾಗಿ**

ಸುಜಾನ್ ಸಿಂಗ್ ಪಾರ್ಕ್‌ನ ಒಳಗೆ ಕಾಲಿಡುತ್ತಲೇ ಭಾವಶೂನ್ಯವಾದ ಸ್ತಬ್ಧತೆ ನನ್ನನ್ನು ಆವರಿಸಿತು. ನಾನು ಹೋಗಬೇಕಾದ್ದು ಇ–ಬ್ಲಾಕ್. ದೆಹಲಿಯಷ್ಟೇ ಹಳೆಯ ಐತಿಹ್ಯದೊಡನೆ, ಕಾಲದೊಂದಿಗೆ ಜರ್ಜರಿತವಾದ ಇಮಾರತ್‌ನಂತೆ, ಮೌನ ಕೌತುಕದಂತೆ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿಯ ಕಾದಂಬರಿಕಾರ, ಅಂಕಣಕಾರ ಖುಷ್ವಂತ್ ಸಿಂಗ್ ಕೂಡ ಇರುವುದು ಇದೇ ಇ–ಬ್ಲಾಕ್‌ನಲ್ಲಿ. ನಮ್ಮ ಹಿರಿಯ ಕನ್ನಡತಿ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರೂ ಇದೇ ಬ್ಲಾಕ್ ನಲ್ಲಿದ್ದಾರೆಂದು ಗೊತ್ತಾಗಿನಿಂದ ನನಗೆ ಸುಜಾನ್ ಸಿಂಗ್ ಪಾರ್ಕ್ ಒಂದು ಹಗಲುಗನಸಿನಂತೆ ಕಾಡುತ್ತಿತ್ತು. ಸಾವಿತ್ರಿ ಶಾಸ್ತ್ರಿಯವರ ಪತಿ, ಗೋಪಾಲ ಶಾಸ್ತ್ರಿಯವರ ಪೂರ್ವಜರು (ಅವರ ಮುತ್ತಾತನ ಕಾಲ) 180 ವರ್ಷಗಳ ಹಿಂದೆಯೇ ಮೈಸೂರಿನಿಂದ ಕಾಶಿಯಾತ್ರೆಗೆಂದು ಬಂದು ಹಾಗೇ ಇಲ್ಲಿಯೇ ಉತ್ತರ ಭಾರತದಲ್ಲಿ ನೆಲೆಸಿಹೋದವರು. ಆ ಕಾಲದಲ್ಲಿ ಕಾಶಿಗೆ ಹೋದವರು ಮರಳಿ ಬರುವುದಿಲ್ಲವೆಂಬ ನಂಬಿಕೆಯಿಂದ ಶ್ರಾದ್ಧಕರ್ಮಗಳನ್ನೆಲ್ಲ ತೀರಿಸಿಯೇ ಕಳಿಸುತ್ತಿದ್ದರಂತೆ. ಗಾಡಿ ಮೋಟರ್ ಇಲ್ಲದ ಕಾಲ. ಕಾಲ್ನಡಿಗೆಯಲ್ಲಿ ಬರುತ್ತಿದ್ದರೋ ಹೇಗೊ ಗೊತ್ತಿಲ್ಲ. ಏನು ಕಾರಣವೋ ಶಾಸ್ತ್ರಿಯವರ ಪೂರ್ವಜರೂ ಮರಳಿ ಹೋಗಲಿಲ್ಲ. ಕಾಶಿಯಲ್ಲಿ, ನಂತರ ಬಿಹಾರದ ಗಯಾದಲ್ಲಿ ತಳವೂರಿದರು. ದೆಹಲಿಯ ಏಕೈಕ ಕನ್ನಡ ಶಾಲೆಯ ಸುವರ್ಣಮಹೋತ್ಸವದ ಸ್ಮರಣ ಸಂಚಿಕೆಗಾಗಿ ನಾನೇ ಸಾವಿತ್ರಮ್ಮನವರ ಸಣ್ಣ ಸಂದರ್ಶನಕ್ಕೆಂದು ಬಂದಿದ್ದೆ. ಹಾಗೇ ಇಲ್ಲಿಗೆ ಬರಲು ಪ್ರೇರಣೆಯಾದದ್ದು ಖುಷ್ವಂತ್ ಸಿಂಗ್ ಅವರೂ ಅಲ್ಲಿದ್ದಾರೆಂಬ ಪುಳಕ. ಕಂಡೇನೆಂಬ ಹುಸಿ ಆಸೆ.

ಬ್ರಿಟಿಷರ ಸಾಮ್ರಾಜ್ಯದಲ್ಲಿ ಬದುಕಿ ಬಾಳಿದ ದೆಹಲಿಯ ಅನೇಕರ ಜೀವನವೂ ಇತಿಹಾಸದಂತೆ ನಿಗೂಢ ಮತ್ತು ಒಮ್ಮೊಮ್ಮೆ ಕುತೂಹಲ ಹುಟ್ಟಿಸುತ್ತದೆ. ಖುಷ್ವಂತ್‌ರ 'ದಿಲ್ಲಿ' ಕಾದಂಬರಿ ಓದಿದಾಗ– ಭಾರತದ ಸಂಪತ್ತನ್ನು ದೋಚಿಕೊಂಡು ಸಮರಕಂಡಕ್ಕೆ ಹೋದ ತೈಮೂರ, ಅನಂಗಪಾಲ್ ತೋಮರ, ಅಲ್ಲಾವುದ್ದೀನ್ ಖಿಲ್ಜಿ, ಕುತ್ಬುದ್ದೀನ್ ಐಬಕ್, ತುಘಲಕ್‌ರ ಆಳ್ವಿಕೆ, ಜನರ ಮೇಲೆ ದೌರ್ಜನ್ಯದ ಶಾಸನವನ್ನು ನಡೆಸಿದ ಜಹಾಂಗೀರ, ದಿಲ್ಲಿಯನ್ನು ಬಹುವಾಗಿ ಮೆಚ್ಚಿ ಷಹಾಜಹಾನ್‌ಬಾದ್ ಕಟ್ಟಿಸಿದ ಷಹಾಜಹಾನ್‌ನನ್ನು ಅವನ ಮಕ್ಕಳೇ ಮಯೂರ ಸಿಂಹಾಸನದ ಆಸೆಗಾಗಿ ಸೆರೆ ಹಿಡಿದು ಹಾಕಿದ್ದು, ಔರಂಗಜೇಬನ ಕುತಂತ್ರ ಎಲ್ಲವೂ ಮತ್ತೆ ಕಣ್ಣಿಗೆ ಕಟ್ಟಿ, ನಾನು ದೆಹಲಿಯ ರಸ್ತೆಗಳಲ್ಲಿ ಓಡಾಡುವಾಗ ಹಳವಂಡದಂತೆ ಧುತ್ತನೆ ನೆನಪಿಗೆ ಬರುತ್ತವೆ. ಮೊಹಮ್ಮದ ಘಜನಿ ಹಿಂದೂಸ್ತಾನದ ಮೇಲೆ ಹದಿನೇಳು ಬಾರಿ ದಾಳಿ ಮಾಡಿ ಥಾಣೇಶ್ವರದ ಚಕ್ರಸ್ವಾಮಿ ಗುಡಿ ಮತ್ತು ಸೋಮನಾಥ ದೇವಸ್ಥಾನವನ್ನು ಧ್ವಂಸಮಾಡಿದ. ದಿನಕ್ಕೆರಡು ಬಾರಿ ಉಕ್ಕಿ ಸೋಮನಾಥನ ಪಾದತೊಳೆಯುವ ಸಾಗರದೇವತೆ ಭೋರ್ಗರೆದು ಉಕ್ಕಿ ಘಜನಿಯಿಂದ ಸೋಮನಾಥ ದೇವರನ್ನೇಕೆ ರಕ್ಷಿಸಲಿಲ್ಲ? –ಎಂದು ಪ್ರಶ್ನಿಸುವ ಖುಷ್ವಂತ್ ಅಜ್ಜ– ಇಡೀ ಹಿಂದುಸ್ತಾನದ ಇತಿಹಾಸವನ್ನು ತಮ್ಮ ಅನುಭವದ ಒರೆಯಿಂದ ಮರುಸೃಷ್ಟಿಸಿ ಕೊಟ್ಟ ಕಾರಣಕ್ಕಾಗಿಯೇ ನನಗೆ ಇಷ್ಟವಾಗುತ್ತಾರೆ. ಬ್ರಿಟಿಷರ ಕಾಲದಲ್ಲೇ ಖುಷ್ವಂತ್ ಸಿಂಗ್ ಅವರ ತಂದೆ ಸರ್ ಶೋಭಾ ಸಿಂಗ್ ಮತ್ತು ಅಜ್ಜ ಸುಜಾನ್ ಸಿಂಗ್ ರೈಲ್ವೆ ಹಳಿ ಹಾಕುವ ಕಂಟ್ರ್ಯಾಕ್ಟ್ ಪಡೆದುಕೊಂಡು ಬಿಲ್ಡರ್, ಕಂಟ್ರಾಕ್ಟರ್ ಆಗಿ ಹೆಸರು ಮಾಡಿದ್ದರು. 1911ರಲ್ಲಿ ಬ್ರಿಟಿಷರು ನವದೆಹಲಿಯ ನಿರ್ಮಾಣ ಕಾರ್ಯವನ್ನು ಕೈಗೊಂಡಾಗ ಬ್ರಿಟಿಷ್ ವಾಸ್ತುಶಾಸ್ತ್ರಜ್ಞರಾದ ಎಡ್ವಿನ್ ಲುಟಿಯನ್ಸ್ ಮತ್ತು ಹರ್ಬರ್ಟ್ ಬೇಕರ್ ಜೊತೆ ಕೆಲಸ ಮಾಡಲು ಶೋಭಾ ಸಿಂಗರನ್ನು ಕಂಟ್ರಾಕ್ಟ್ ನೀಡಿ ಬ್ರಿಟಿಷರೇ ಆಹ್ವಾನಿಸಿದರಂತೆ. ಹೀಗೆ ಸರ್ದಾರ್ ಶೋಭಾ ಸಿಂಗ್ ಪರಿವಾರ ಪಂಜಾಬ್‌ನಿಂದ ದೆಹಲಿಗೆ ವರ್ಗಾಯಿಸಿತು. ಬಿಲ್ಡಿಂಗ್ ಕಂಟ್ರಾಕ್ಟರ್ ಆಗಿ ಖುಷ್ವಂತ್ ಸಿಂಗ್ ಅವರ ತಂದೆ ಶೋಭಾ ಸಿಂಗ್ ಸಾಕಷ್ಟು ಜಮೀನನ್ನು ಖರೀದಿಸಿ, ಲೆಕ್ಕವಿಲ್ಲದಷ್ಟು ಆಸ್ತಿ ಮಾಡಿದರಂತೆ. ಅವರಿಗೆ ಆಧೀ ದಿಲ್ಲಿ ಕಾ ಮಾಲಿಕ್ ಎಂದೇ ಜನ ಕರೆಯುತ್ತಿದ್ದರೆಂದು ಖುಷ್ವಂತ್ ಸಿಂಗ್ ಅವರೇ ಅನೇಕ ಬಾರಿ ಉಲ್ಲೇಖಿಸಿದ್ದಾರೆ. ದೆಹಲಿಯ ಕನಾಟ್‌ಪ್ಲೇಸ್, ಆಕಾಶವಾಣಿ ಭವನ, ದಯಾಲ್ ಸಿಂಗ್ ಕಾಲೇಜು, ನ್ಯಾಷನಲ್ ಮ್ಯೂಸಿಯಂ, ಸರಕಾರಿ ವರಿಷ್ಠರಿಗಾಗಿ ಬಂಗಲೆಗಳು ಮೊದಲಾಗಿ ಅನೇಕ ಕಟ್ಟಡಗಳನ್ನು ಕಟ್ಟಿದ್ದಾರೆ. ತಮಗಾಗಿಯೂ ಅನೇಕ ಕಟ್ಟಡಗಳನ್ನೂ ಕಟ್ಟಿಕೊಂಡರು. ಬ್ರಿಟಿಷ್ ವಿನ್ಯಾಸದ

ಮಜಬೂತಾದ ಈ ಸುಜಾನ್‌ಸಿಂಗ್ ಪಾರ್ಕ್ ಅಪಾರ್ಟಮೆಂಟ್ ಕೂಡ ಅವರೇ ತಮ್ಮ ತಂದೆ ಸುಜಾನ್ ಸಿಂಗ್‌ರ ಹೆಸರಲ್ಲಿ ಕಟ್ಟಿದ್ದು. ಆಗಿನ ಸರಕಾರಿ ರಾಯಭಾರಿಗಳಿಗೆ, ಉನ್ನತ ಹುದ್ದೆಯ ಅಧಿಕಾರಿಗಳ ವಾಸಕ್ಕೆ ಅಲಾಟ್ ಮಾಡುತ್ತಿದ್ದರಂತೆ. ಸಾವಿತ್ರಮ್ಮನವರೊಂದಿಗೆ ಸಂದರ್ಶನ ಮಾಡುತ್ತಿದ್ದರೂ ನನ್ನ ಅಂತರ್ಮನದಲ್ಲಿ ನಾನು ಕುಳಿತ ಇದೇ ಕಟ್ಟಡದ ಭೂ–ಮನೆಯಲ್ಲಿ ನನ್ನ ಅಭಿಮಾನದ, ಅಸಾಧಾರಣ ಚೈತನ್ಯದ ವ್ಯಕ್ತಿ ಏನು ಮಾಡುತ್ತಿರಬಹುದು? ಓದುತ್ತಿರಬಹುದೇ? ಮಲಗಿ ವಿಶ್ರಮಿಸುತ್ತಿರಬಹುದೇ? ಎಂದು ಯೋಚಿಸುತ್ತಿದ್ದೆ. ಭೆಟ್ಟಿಯಾಗುವುದಂತೂ ದೂರದ ಮಾತಾಯಿತು. ಯಾಕಂದರೆ ತೊಂಭತ್ತಾರರ ಖುಷ್ವಂತ್ ಅಜ್ಜ ಮುದಿ ವಯಸ್ಸಿನ ಕಿರಿಕಿರಿಯಿಂದಲೋ ಏನೋ ಈಗ ಯಾರನ್ನೂ ಶಿಫಾರಸ್ಸು, ಮನವಿ ಪತ್ರ ಇಲ್ಲದೇ ಕಾಣುವುದಿಲ್ಲವಂತೆ. ಈಗಲೂ ಬೆಳಗಿನ ನಾಲ್ಕೂವರೆಗೆ ಎದ್ದು, ಟೇಬಲ್ ಲ್ಯಾಂಪ್ ಹಾಕಿ ಓದುತ್ತಲೋ, ಬರೆಯುತ್ತಲೋ ಕುಳಿತಿರುತ್ತಾರಂತೆ. ಅವರೇ ದೆಹಲಿಯ ಒಂದು ಜೀವಂತ ಸ್ಮಾರಕವಿದ್ದಂತೆ. ಆಗಾಧ ಜೀವನಪ್ರೀತಿ ಅವರದು. ಮತ್ತೆ ನಾನು ಶಾಸ್ತ್ರಿ ಅಂಟಿಯನ್ನು ಪೀಡಿಸಲಿಲ್ಲ.

ಶೋಭಾ ಸಿಂಗ್ ಅವರಿಗೆ ನಾಲ್ಕು ಜನ ಗಂಡು ಮಕ್ಕಳಲ್ಲಿ ಈಗ ಉಳಿದವರು ಖುಷ್ವಂತ್ ಸಿಂಗ್, ಬ್ರಿಗೇಡಿಯರ್ ಗುರುಬಕ್ಷ ಸಿಂಗ್ ಮೊನ್ನೆ ಮೊನ್ನೆ ತೀರಿಹೋದರು. ಸೋದರಿ ಬಗ್ಗೆ ಕೇಳಲಿಲ್ಲ. ಶೋಭಾ ಸಿಂಗ್ ಆ ಕಾಲದಲ್ಲೇ ತಮ್ಮ ಮಕ್ಕಳನ್ನು ಲಂಡನ್ ವಿಶ್ವವಿದ್ಯಾಲಯದಲ್ಲಿ ಓದಿಸಿದ್ದರು. ಕಾನೂನು ಓದಿದ ಖುಷ್ವಂತ್‌ರಿಗೆ ಸುಳ್ಳೇ ಸರಕಾಗಿರುವ ವಕೀಲಿಗಿರಿ ರುಚಿಸಲಿಲ್ಲ. ಬರಹವೇ ಅವರ ಅತ್ಯಂತ ಪ್ರೀತಿಯ ಪ್ರವೃತ್ತಿಯಾಗಿ ಉಳಿಯಿತು. ನೇರ ಮಾತಿನ, ಯಾರ ಮುಲಾಜಿಗೂ ಒಳಪಡದ, ಇದ್ದುದ್ದನ್ನು ಇದ್ದಂತೆ ಹೇಳಿಬಿಡುವ ನಿಷ್ಠುರ, ಪ್ರಾಮಾಣಿಕ ಖುಷ್ವಂತ್ ಸಿಂಗ್‌ರನ್ನು ಪ್ರೀತಿಸುವಷ್ಟೇ, ದ್ವೇಷಿಸುವವರೂ ಇದ್ದಾರೆ. ರಾಜ್ಯಸಭಾ ಸದಸ್ಯರಾಗಿದ್ದ ಖುಷ್ವಂತ್ ಸಿಂಗ್ ಅವರಿಗೆ 1974 ರಲ್ಲಿ ಪದ್ಮಭೂಷಣ ಲಭಿಸಿತ್ತು, ಆದರೆ 1984 ರಲ್ಲಿ ಅಮೃತಸರ್ ಗೋಲ್ಡನ್ ಟೆಂಪಲ್ ಮೇಲೆ ಭಾರತೀಯ ಸೈನ್ಯ "ಆಪರೇಶನ್ ಬ್ಲೂ ಸ್ಟಾರ್" ನಡೆಸಿದ್ದನ್ನು ಖಂಡಿಸಿದ ಖುಷ್ವಂತ್ ಸಿಂಗ್ ಪದ್ಮ ಪ್ರಶಸ್ತಿಯನ್ನು ವಾಪಸ್ಸು ನೀಡಿದರು. ಮುಂದೆ 2007 ರಲ್ಲಿ ಪದ್ಮವಿಭೂಷಣ ಪಡೆದರು. ಅವರ ಅತ್ಯಂತ ರೂಪವತಿ ಪತ್ನಿ ಕವಲ್ ಕೌರ್ ನಿರ್ದಾಕ್ಷಿಣ್ಯದ, ನೇರ ಮಾತಿನ ಶಿಸ್ತಿನ ಮಹಿಳೆಯಾಗಿದ್ದಳಂತೆ. ಲಂಡನ್ನಿನಲ್ಲಿ ಖುಷ್ವಂತ್ ಸಿಂಗ್ ಮತ್ತು ಕವಲ್ ಕೌರ್ ಒಟ್ಟಿಗೇ ಓದಿದವರು. ಓದುವಾಗ ಅವಳ ಆರಾಧಕರೂ, ಪ್ರೇಮಿಗಳೂ ಕಡಿಮೆಯಿದ್ದಿಲ್ಲವಂತೆ. ಇದೇ ಸುಜಾನ್ ಸಿಂಗ್ ಪಾರ್ಕಿನ ಇನ್ನೊಂದು ಬ್ಲಾಕಿನಲ್ಲಿನ ಅವರ ಹಳೇ ಗೆಳೆಯನೊಂದಿಗೆ ಆಗಾಗ ಹಿಂದಿನ ಕಲ್ಲು ಬೆಂಚಿನ ಮೇಲೆ ಕುಳಿತು ಹರಟುತ್ತಿದ್ದರಂತೆ. ದೇಶ ವಿಭಜನೆಯಾಗಿ ಅಸಂಖ್ಯಾತ ಸಿಖ್ಖರು, ಪಂಜಾಬಿಗಳು ದೆಹಲಿಗೇ ವಲಸೆ ಬಂದರಂತೆ. ಇಡೀ ಹೊಸದೆಹಲಿ ನಿರ್ಮಾಣವಾದುದೇ ಈ ನಿರಾಶ್ರಿತರಿಗಾಗಿ ಎಂಬಂತಿದೆ. ಆಗ ಒಂದು ಕಡೆ ಜನಸಾಮಾನ್ಯ ಸಮುದಾಯ ಬ್ರಿಟಿಷರನ್ನು ದೇಶದಿಂದ ತೊಲಗಿಸುವ ಹೋರಾಟದಲ್ಲಿ ತೊಡಗಿದ್ದರೆ, ಇನ್ನೊಂದೆಡೆ ಸ್ಥಿತಿವಂತ, ವ್ಯಾಪಾರಿ, ಉದ್ದಿಮೆ ಹೊಂದಿದ ಬಂಡವಾಳಶಾಹಿ ಸಮುದಾಯ ಯಾವ ಹೋರಾಟಗಳಲ್ಲಿಯೂ ಭಾಗವಹಿಸದೇ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಂಡು ಬ್ರಿಟಿಷರನ್ನು ಒಲೈಸುತ್ತ ಅವರಿಗೆ ಅನುಕೂಲಸಿಂಧುಗಳಾಗಿ ತಮ್ಮ ಸ್ಥಾನ ಮಾನಗಳನ್ನು ಭದ್ರಪಡಿಸಿಕೊಂಡವರು. ನೆಮ್ಮದಿಯ ಬದುಕಿಗಾಗಿ ಅನೇಕ ರೂಪವತಿಯರಾದ ಹೆಣ್ಣುಮಕ್ಕಳೂ ಬ್ರಿಟಿಷರನ್ನು ಒಲಿಸಿಕೊಂಡಿದ್ದರಂತೆ. ಅವರು ಒಲಿಸಿಕೊಂಡರೋ, ಇವರು ಬಳಸಿಕೊಂಡರೋ ಗೊತ್ತಿಲ್ಲ. ಇಂಥ ಅಂತೆ ಕಂತೆಗಳ ಇತಿಹಾಸ ದಾಖಲಿಸದ ಕಥೆಗಳನ್ನು ಇಲ್ಲಿನ ಹಳೇ ಜನ ಹೇಳುತ್ತಾರೆ. ಹೀಗೆ ಹಿಂದೆ ಪರ್ಶಿಯನ್ ನಂತರ ಅಂಗ್ರೇಜಿಗಳೊಂದಿಗೆ ಕ್ರಾಸ್ ಬ್ರೀಡ್ ಆಗಿದ್ದರಿಂದಲೇ ಇವರು ನೀಲಿ ಕಣ್ಣಿನ, ಕೆಂಚುಕೂದಲಿನ ಚೆಂದದ ಸಂತತಿಯನ್ನು ಬೆಳೆಸಿದರು ಎಂದು ಕೆಲವರು ಬಹಿರಂಗವಾಗಿಯೇ ಟೀಕಿಸುತ್ತಾರೆ. ಗೊತ್ತಿಲ್ಲ, ಇದ್ದರೂ ಇದ್ದೀತು. ಮಹಾಭಾರತದ ಇಂದ್ರಪ್ರಸ್ಥ– ದೆಹಲಿ ಎಷ್ಟೊಂದು ವಂಶಜರನ್ನು ಆಕರ್ಷಿಸಿಲ್ಲ. ಹಿಂದುಸ್ತಾನದ ಮೇಲೆ ಪ್ರಭುತ್ವವನ್ನು ಹೊಂದಲು, ದೆಹಲಿಯನ್ನು ವಶಪಡಿಸಿಕೊಳ್ಳಲೋಸುಗ ಏಸೊಂದು ದಾಳಿಗಳು, ಅತ್ಯಾಚಾರಗಳು ನಡೆದಿಲ್ಲ? ಏಸೊಂದು ಪ್ರಭುತ್ವಗಳು ಅಧಿಪತ್ಯ ನಡೆಸಿಲ್ಲ?

> **ನೇರ ಮಾತಿನ, ಯಾರ ಮುಲಾಜಿಗೂ ಒಳಪಡದ, ಇದ್ದುದ್ದನ್ನು ಇದ್ದಂತೆ ಹೇಳಿಬಿಡುವ ನಿಷ್ಠುರ, ಪ್ರಾಮಾಣಿಕ ಖುಷ್ವಂತ್ ಸಿಂಗ್‌ರನ್ನು ಪ್ರೀತಿಸುವಷ್ಟೇ, ದ್ವೇಷಿಸುವವರೂ ಇದ್ದಾರೆ.**

ಬೆಳಗಿನ ಹನ್ನೊಂದಕ್ಕೆ ಸುಜಾನ್ ಸಿಂಗ್ ಪಾರ್ಕ್ ಬಂದವಳಿಗೆ ಸಂಜೆ ನಾಲ್ಕಾದರೂ ಸಮಯ ಹೋಗಿದ್ದೇ ತಿಳಿಯಲಿಲ್ಲ. ಖುಶ್ವಂತ್ ಸಿಂಗ್ ಭೆಟ್ಟಿಯಾದರೆ ಉತ್ತರವಿಲ್ಲದ ಅನೇಕ ಪ್ರಶ್ನೆಗಳನ್ನು ಕೇಳುವ ಅಂದುಕೊಂಡಿದ್ದೆ. ಕಾಣಲಾರದ್ದಕ್ಕೆ ಬೇಸರವಾಯಿತು. ಮೆಟ್ಟಲಿಳಿದು ಕೆಳಗೆ ಬರುವಾಗ ಖುಷ್ವಂತ್ ಸಿಂಗ್ ಅವರ ಮನೆ 49–ಇ ಕಡೆ ಹಾಗೇ ಕಣ್ಣು ಹಾಯಿಸಿದೆ. ಪ್ಲೀಸ್ ಡು ನಾಟ್ ರಿಂಗ್ ದ ಬೆಲ್ ಅನ್‌ಲೆಸ್ ಎಕ್ಸ್‌ಪೆಕ್ಟೆಡ್ ನಿರ್ದಾಕ್ಷಿಣ್ಯವಾಗಿ ಬರೆದ ಫಲಕವನ್ನೇ ನೋಡುತ್ತ ದಾರಿಗಿಳಿದೆ. ಒಳಗಿನ ಜೀವಂತಿಕೆಯನ್ನು ಒಳಗೇ ಮುಚ್ಚಿ ಕೀಲಿಹಾಕಿಕೊಂಡ ಬಾಗಿಲೆದುರೆಲ್ಲ ನಿರ್ಜೀವವಾದ ಸ್ತಬ್ಧ ಕತ್ತಲು ತುಂಬಿಕೊಂಡಿತ್ತು. ಅ

***ರೇಣುಕಾ ನಿಡಗುಂದಿ***

## ದಿಲ್ಲಿ ಡೈರಿಯ ಪುಟಗಳು

ದೆಹಲಿಯ ಬರಹಗಾರ್ತಿ ರೇಣುಕಾ ನಿಡಗುಂದಿ ಅವರ ದಿಲ್ಲಿ ಡೈರಿಯ ಪುಟಗಳು ಕೃತಿಯನ್ನು ಹಿರಿಯ ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆ ಅವರು ಬೆಂಗಳೂರಿನೆಲ್ಲಿ ಮಾರ್ಚ್ 30ರಂದು ಬಿಡುಗಡೆಗೊಳಿಸಿದರು. ಅಹರ್ನಿಶಿ ಪ್ರಕಾಶನ ಪ್ರಕಟಿಸಿರುವ ದೆಹಲಿಯ ಕುರಿತಾದ ಆಪ್ತ ಬರಹಗಳ ಈ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಹಿರಿಯ ಬರಹಗಾರ ಡಾ. ಸಿ.ಎನ್. ರಾಮಚಂದ್ರನ್, ಮುಖ್ಯಮಂತ್ರಿಯವರ ಮಾಧ್ಯಮ ಸಹಲಹೆಗಾರ ದಿನೇಶ್ ಅಮೀನ್ ಮಟ್ಟು ಮತ್ತು ಪ್ರಕಾಶಕಿ ಅಕ್ಷತಾ ಅವರು ಉಪಸ್ಥಿತರಿದ್ದರು. ಅ





# ದೆಹಲಿ ಮತ್ತು ಸರದಾರ

**ಸತ್ಯ** ಎನ್ನುವುದು ಪರಿಪೂರ್ಣವಲ್ಲ. ನಮ್ಮ ಸಾಂಸ್ಕೃತಿಕ ಅಗತ್ಯತೆಗಳನ್ನು ಭಾಷೆಯ ಮೂಲಕ ಕಟ್ಟಿ ಕೊಳ್ಳುವುದೇ ಸತ್ಯವಾಗುತ್ತದೆ. ನಾವು ಬದುಕುತ್ತಿರುವ ಈ ಜಗತ್ತು ಕೂಡಾ ಅಪರಿಪೂರ್ಣ. ಎರಡೂವರೆ ಶತಮಾನಗಳ ಹಿಂದೆ ಇಂತಹ ಚಿಂತನೆಯ ಮೂಲಕ ಉರ್ದು ಕವಿ ಮಿರ್ಜಾ ಗಾಲೀಬನು ಸಮಾಜದ ಸ್ವೀಕೃತ ತತ್ವಗಳನ್ನು ಪ್ರಶ್ನಿಸಿದ. ಹಳೆಯ ಗಲ್ಲಿಗಳಲ್ಲಿ ಗಾಲೀಬನು ಕಂಡ ಶೂನ್ಯತೆಯನ್ನು ಹುಡುಕುತ್ತಿರುವ ದೆಹಲಿಯ ಮನಸ್ಸುಗಳು ಮಾರ್ಚ್ 20ರಂದು ದೆಹಲಿಯ ಆತ್ಮದ ಮತ್ತೊಂದು ತುಣುಕನ್ನು ಕೂಡ ಕಳೆದುಕೊಂಡಿತು. ಪರಿಪೂರ್ಣತೆಯನ್ನು ಕಟ್ಟಿಕೊಳ್ಳದೆ, ಮನಸಿನೊಳಗಿನ ಮುಗ್ಧತೆಗಳಿಗೆ ಪರದೆಗಳನ್ನು ಎಳೆಯದೆ, ತುಂಬು ಬದುಕನ್ನು ಬಾಳಿದ ಖುಷ್ವಂತ್ ಸಿಂಗ್ ಅವರ ಮನೆಯ ಬೆಲ್ ಬಾರಿತು, ನಿರೀಕ್ಷಿತ ಆಗಂತುಕನಿಗೆ.

ಉಳಿದವರು ಕಂಡೂ ಕಾಣದಂತಿರುವ ದೆಹಲಿಯ ಅಮೂರ್ತ, ಅಸಂಗತತೆಗಳನ್ನು ಅನುಭವಿಸಿ ಅವುಗಳನ್ನು ಬರಹದ ಮೂಲಕ ಹಂಚುವುದಕ್ಕೆ ಸಾಧ್ಯವಾಗಿರುವುದು, ದೆಹಲಿಯ ಸಂವೇದನಾಶೀಲ ಬರಹಗಾರ್ತಿ ರೇಣುಕಾ ನಿಡಗುಂದಿ ಅವರಿಗೆ. ಅವರ 'ಡಿಲ್ಲಿ ಡೈರಿಯ ಪುಟಗಳು' ಬೆಂಗಳೂರಿನಲ್ಲಿ ಮಾರ್ಚ್ 30ರಂದು ಬಿಡುಗಡೆಯಾದಾಗ ನಾವೆಲ್ಲರೂ ಸಂಭ್ರಮಿಸಿದೆವು. ದೆಹಲಿಯ ಗಲ್ಲಿಗಳಲ್ಲಿ, ಎತ್ತರದ ಮಹಡಿಗಳಲ್ಲಿ, ಕಚೇರಿಗಳ ಕಂಪ್ಯೂಟರ್‌ಗಳಲ್ಲಿ ಅವೆಷ್ಟೋ ಪುಟಗಳು ಇನ್ನೂ ಮುಚ್ಚಿಕೊಂಡಿವೆ. ಅವುಗಳನ್ನು ತೆರೆದು ನೋಡಿ ಸಹೃದಯರೊಂದಿಗೆ ಹಂಚಿಕೊಳ್ಳುವುದರಿಂದ ಮನಸುಗಳನ್ನು ಹತ್ತಿರ ತರಬಹುದು.

ದೆಹಲಿ ಕರ್ನಾಟಕ ಸಂಘವು ಈಗಾಗಲೇ 'ವಾರ್ಧಾಯಾತ್ರೆ'ಯ ಬಿಡುಗಡೆಗೆ ಸಜ್ಜಾಗುತ್ತಿದೆ. ಮುಂದಿನ ದಿನಗಳಲ್ಲಿ ದೆಹಲಿಯ ಬರಹಗಾರರ ಕೃತಿಗಳನ್ನು ಚರ್ಚಿಸುವುದರೊಂದಿಗೆ, ಗುಣಮಟ್ಟದ ಕೃತಿಗಳನ್ನು ಪ್ರಕಟಿಸುವಲ್ಲಿ ಆಸಕ್ತಿ ವಹಿಸಬಹುದು. ಅ

*ಬಾಲಕೃಷ್ಣ ನಾಯ್ಕ್ ಡಿ.*

## ಬೀಳ್ಕೊಡುಗೆ ಸಮಾರಂಭ




ಜನಕಪುರಿ ಕನ್ನಡಕೂಟದ ಕಾರ್ಯದರ್ಶಿ ಶ್ರೀ ಎನ್. ಪ್ರಕಾಶ್ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಚಂದ್ರಮೌಳಿ ಅವರಿಗೆ ಮಾರ್ಚ್ 26ರಂದು ದೆಹಲಿ ಕರ್ನಾಟಕ ಸಂಘದ ವಿಚಾರಸಂಕಿರಣ ಭವನದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಭಾಗವಹಿಸಿದ ಶ್ರೀ ನರಸಿಂಹಮೂರ್ತಿ, ಶ್ರೀ ಎನ್.ಪಿ. ಚಂದ್ರಶೇಖರ್ ಮತ್ತು ಶ್ರೀ ಎಸ್.ಎಲ್. ಭಂಡಾರ್‌ಕರ್ ಅವರು ಮಾತನಾಡಿ ಪ್ರಕಾಶ್ ಅವರ ನೇರನಡೆ ಹಾಗೂ ಕಾರ್ಯಕ್ಷಮತೆಗಳನ್ನು ಶ್ಲಾಘಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದ ವತಿಯಿಂದ ಪ್ರಕಾಶ್ ದಂಪತಿಗಳು ಮತ್ತು ಚಂದ್ರಮೌಳಿ ದಂಪತಿಗಳಿಗೆ ಪುಷ್ಪಗುಚ್ಛ ನೀಡಿ, ಶಾಲು ಹೊದಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ನೆನಪಿನ ಕಾಣಿಕೆ ನೀಡಿದರು. ಜನಕಪುರಿ ಕನ್ನಡಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ಕೂಟದ ವತಿಯಿಂದ ಪುಷ್ಪಗುಚ್ಛ ನೀಡಿ, ಶಾಲು ಹೊದಿಸಿದರು, ಕಾರ್ಯದರ್ಶಿ ಶ್ರೀ ಗಂಗಾಧರ್ ಅವರು ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಅ

**ಚಂದ್ರಶೇಖರ್ ಎನ್.ಪಿ.**



## ಓದುಗರ ಪತ್ರ




ಕಳೆದ ಹಲವು ವರ್ಷಗಳಿಂದ "ಅಭಿಮತ" ಪತ್ರಿಕೆ ಪ್ರತಿ ತಿಂಗಳೂ ತಪ್ಪದೆ ಕೈ ಸೇರುತ್ತಿದೆ. ತಮ್ಮ ಸಂಘದ ಈ ಪತ್ರಿಕೆ ದೆಹಲಿಯಲ್ಲಿಯ ಸಮಸ್ತ ರಂಗಗಳ ಅದರಲ್ಲೂ ಕನ್ನಡ ಭಾಷೆ, ಕನ್ನಡಿಗರಿಗೆ–ಸಂಬಂಧಪಟ್ಟ ಸಮಸ್ತ ವಿಷಯಗಳನ್ನು ಚಿತ್ರ ಸಮೇತ ಹೊತ್ತು ಪ್ರತಿ ತಿಂಗಳೂ ಸರ್ವಾಂಗ ಸುಂದರವಾಗಿ ಸಮಯಕ್ಕೆ ಸರಿಯಾಗಿ ಹೊರಬರುತ್ತಿರುವುದು ಅಭಿನಂದನೀಯ. ಇತ್ತೀಚೆಗೆ ಕೆಲವು ತಿಂಗಳುಗಳಿಂದ ಒಂದು ಹೊಸ ಅಂಕಣ "ಭಾವನೆಯ ಬಳ್ಳಿ" ಅಭಿಮತದಲ್ಲಿ ಬರುತ್ತಿದೆ. ಈ ಅಂಕಣದಲ್ಲಿ ಬರುತ್ತಿರುವ ಲೇಖನಗಳು ಅರ್ಥಗರ್ಭಿತವಾಗಿವೆ ಮತ್ತು ಜೀವನಕ್ಕೆ ಅತೀ ಹತ್ತಿರವಾಗಿವೆ. ಅ

***ಶ್ಯಾಮ ಕುರಂದವಾಡ***
***ಬೆಂಗಳೂರು***

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
April - 2014, Vol. No.24, Issue No.7, Price Rs.1/-  RNI Regn. No. 53405/91, DL-SW-1/4016/13-15
Printout Date : April 8th / 9th, Postal Date :10th / 11th, Total Pages-20











ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದ ಸ್ಪರ್ಧೆಯಲ್ಲಿ ಸಂಘದ ಸದಸ್ಯರು ಬಿಡಿಸಿದ ರಂಗೋಲಿ

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770